# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶುಕ್ರವಾರ, ಡಿಸೆಂಬರ್ 18, 2020

ಸಂಪುಟ : 47 ಸಂಚಿಕೆ : 228 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


# ರೈತರ ಹೋರಾಟಕ್ಕೆ ಅಡ್ಡಿಯಿಲ್ಲ

## ಪ್ರತಿಭಟಿಸುವ ಮೂಲಭೂತ ಹಕ್ಕಿನಲ್ಲಿ ಮಧ್ಯ ಪ್ರವೇಶವಿಲ್ಲ : ಸುಪ್ರೀಂ ಕೋರ್ಟ್

### ಕೃಷಿ ಕಾಯ್ದೆಗಳ ಜಾರಿ ತಡೆಯಲು ಕೇಂದ್ರಕ್ಕೆ ಸಲಹೆ

ನವದೆಹಲಿ ಡಿ. 17 – ದೆಹಲಿಯಲ್ಲಿ ರೈತರು ನಡೆಸುತ್ತಿರುವ ಹೋರಾಟ ಅಬಾಧಿತವಾಗಿ ನಡೆಯಲು ಬಿಡಬೇಕು ಎಂದು ಹೇಳಿರುವ ಸುಪ್ರೀಂ ಕೋರ್ಟ್, ಪ್ರತಿಭಟಿಸುವುದು ಮೂಲಭೂತ ಹಕ್ಕಾಗಿರುವುದರಿಂದ ಈ ವಿಷಯದಲ್ಲಿ ತಾನು ಮಧ್ಯ ಪ್ರವೇಶಿಸುವುದಿಲ್ಲ ಎಂದು ತಿಳಿಸಿದೆ.

ಪ್ರತಿಭಟನೆಯನ್ನು ಬಗೆಹರಿಸಲು ರೈತರು ವಿರೋಧಿಸುತ್ತಿರುವ ಕೃಷಿ ಕಾಯ್ದೆಗಳ ಜಾರಿಯನ್ನು ತಡೆಯಬೇಕು ಎಂಬ ವಿಚಾರವನ್ನೂ ಸರ್ಕಾರದ ಮುಂದಿಟ್ಟಿದೆ. ಆದರೆ, ಈ ಪ್ರಸ್ತಾವನೆಗೆ ಒಪ್ಪದ ಕೇಂದ್ರ ಸರ್ಕಾರ, ಕಾಯ್ದೆಗಳನ್ನು ತಡೆದರೆ ರೈತರು ಮಾತುಕತೆಗೆ ಬರುವುದಿಲ್ಲ ಎಂದು ಹೇಳಿದೆ.

ಸುಪ್ರೀಂ ಕೋರ್ಟ್ ಸಲಹೆಯ ಬಗ್ಗೆ ಕೇಂದ್ರ ಸರ್ಕಾರದ ಸೂಚನೆಗಳನ್ನು ಪಡೆದ ನಂತರ ತಿಳಿಸುವುದಾಗಿ ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ತಿಳಿಸಿದ್ದಾರೆ.

ರೈತರು ಅಂಹಿಸಾತ್ಮಕ ಪ್ರತಿಭಟನೆ ನಡೆಸುವ ಹಕ್ಕು ಹೊಂದಿದ್ದಾರೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, ಈ ಹೋರಾಟದಿಂದಾಗಿ ಇತರರು ಮುಕ್ತವಾಗಿ ಸಂಚರಿಸುವ ಹಾಗೂ ಅಗತ್ಯ ಆಹಾರ ಮತ್ತಿತರೆ ಪೂರೈಕೆಗಳನ್ನು ಪಡೆಯುವ ಹಕ್ಕಿಗೆ ತೊಂದರೆಯಾಗಬಾರದು. ಪ್ರತಿಭಟಿಸುವ ಹಕ್ಕು ಎಂದರೆ ಇಡೀ ನಗರವನ್ನು ಸ್ತಬ್ಧಗೊಳಿಸುವುದಲ್ಲ ಎಂದು ನ್ಯಾಯಾಲಯ ಇದೇ ಸಂದರ್ಭದಲ್ಲಿ ತಿಳಿಸಿದೆ.

ಬಿಕ್ಕಟ್ಟು ಬಗೆಹರಿಸುವ (4ನೇ ಪುಟಕ್ಕೆ)

### ಪ್ರತಿಭಟನೆ ಎಂದರೆ ಇಡೀ ನಗರ ಸ್ತಬ್ಧಗೊಳಿಸುವುದಲ್ಲ

ಪ್ರತಿಭಟನಾಕಾರರು ಇತರರ ಹಕ್ಕುಗಳನ್ನು ದಮನಿಸುವುದನ್ನು ತಡೆಯಲು ಪೊಲೀಸರು ಹಾಗೂ ಅಧಿಕಾರಿಗಳಿಗೆ ಪ್ರಜಾಪ್ರಭುತ್ವದಲ್ಲಿ ಅಧಿಕಾರವಿದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ದೆಹಲಿಯಲ್ಲಿ ರೈತರ ಪ್ರತಿಭಟನೆ ಕುರಿತು ವಿಚಾರಣೆ ನಡೆಸುತ್ತಿದ್ದ ಸುಪ್ರೀಂ ಕೋರ್ಟ್, ರೈತರು ಇಷ್ಟು ದೊಡ್ಡ ಸಂಖ್ಯೆಯಲ್ಲಿ ನಗರ ಪ್ರವೇಶಿಸಲು ಅವಕಾಶ ಕೊಟ್ಟರೆ ಅವರು ಹಿಂಸಾಚಾರಕ್ಕೆ ಮುಂದಾಗುವುದಿಲ್ಲ ಎಂಬ ಗ್ಯಾರಂಟಿ ನೀಡುವವರು ಯಾರು? ಎಂದು ಪ್ರಶ್ನಿಸಿದೆ.

ನ್ಯಾಯಾಲಯ ಈ ಬಗ್ಗೆ ಗ್ಯಾರಂಟಿ ನೀಡಲಾಗದು. (4ನೇ ಪುಟಕ್ಕೆ)

# ಖರೀದಿ ಕೇಂದ್ರದತ್ತ ರೈತರ ನೀರಸ ಚಿತ್ತ

## ಜಿಲ್ಲೆಯಲ್ಲಿ ಭತ್ತಕ್ಕೆ 321, ರಾಗಿಗೆ 50 ಜನ ಮಾತ್ರ ನೋಂದಣಿ


ಎಪಿಎಂಸಿ ಪ್ರಾಂಗಣದ ಸಂಗ್ರಹ ಚಿತ್ರ

ದಾವಣಗೆರೆ, ಡಿ.17 - ಜಿಲ್ಲೆಯಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಬೇಕೆಂಬ ಕೂಗಿನ ನಡುವೆ ಈಗಾಗಲೇ ತೆರೆದಿರುವ ಖರೀದಿ ಕೇಂದ್ರಗಳಲ್ಲಿ ದಾಸ್ತಾನು ಮಾರಾಟ ಮಾಡಲು ರೈತರು ಹಿಂದೇಟು ಹಾಕುತ್ತಿದ್ದಾರೆ.

ಸಾಮಾನ್ಯ ಭತ್ತ ಪ್ರತಿ ಕ್ವಿಂಟಾಲ್‌ಗೆ 1,868 ರೂ.ಹಾಗೂ ಗ್ರೇಡ್-ಎ ಭತ್ತಕ್ಕೆ 1,888 ರೂ. ಬೆಂಬಲ ಬೆಲೆ ಘೋಷಿಸಲಾಗಿದೆ. ಸಾಮಾನ್ಯ ಭತ್ತ ಪ್ರತಿ ರೈತರಿಂದ ಗರಿಷ್ಟ 40 ಕ್ವಿಂ. (ಪ್ರತಿ ಎಕರೆಗೆ 16 ಕ್ವಿಂ. ನಂತೆ) ಖರೀದಿಗೆ ಅವಕಾಶ ಕಲ್ಪಿಸಲಾಗಿದೆ.

ಜಿಲ್ಲೆಯ 66,450 (4ನೇ ಪುಟಕ್ಕೆ)

# ಅಪರ ಜಿಲ್ಲಾಧಿಕಾರಿ ಮನೆಯಲ್ಲಿ ಕಳ್ಳತನ

### ಒಂದೂವರೆ ಕೆಜಿ ತೂಕದ ಬೆಳ್ಳಿ ಸಾಮಗ್ರಿ ಕಳವು

ದಾವಣಗೆರೆ, ಡಿ.17 - ಅಪರ ಜಿಲ್ಲಾಧಿಕಾರಿಗಳವರ ನೂತನ ಮನೆಯಲ್ಲಿ ಕಳ್ಳತನವಾಗಿದ್ದು, ಸುಮಾರು ಒಂದೂವರೆ ಕೆಜಿ ತೂಕದ ಬೆಳ್ಳಿ ದೀಪ ಸೇರಿದಂತೆ ಅಮೂಲ್ಯವಾದ ವಸ್ತುಗಳನ್ನು ಕಳ್ಳರು ದೋಚಿರುವ ಘಟನೆ ನಗರದ ಎಸ್. ಎಸ್. ಲೇಔಟ್ ನ ನೇತಾಜಿ ಸುಭಾಷ್ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದ ಬಳಿ 6ನೇ ಕ್ರಾಸ್ ನಲ್ಲಿ ರಾತ್ರಿ ನಡೆದಿದೆ.

ಲೇಔಟ್‌ನಲ್ಲಿದ್ದ ಮನೆಯಲ್ಲಿ ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ ಮತ್ತು ಕುಟುಂಬ ವರ್ಗದವರು ನಿನ್ನೆಯಷ್ಟೇ (4ನೇ ಪುಟಕ್ಕೆ)


## ಆರನೇ ವರ್ಷದ ಪುಣ್ಯಸ್ಮರಣೆ



### ದಿ|| ಲಕ್ಷ್ಮಣ್‌ರಾವ್ ಪವಾರ್

ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ

ಶ್ರೀಮತಿ ಮಂಜುಳಾಬಾಯಿ ಶ್ರೀ ಅಜ್ಜಪ್ಪ ಪವಾರ್,
ಉಪಾಧ್ಯಕ್ಷರು, ಮರಾಠ ಸಮಾಜ, ದಾವಣಗೆರೆ.
ಶ್ರೀಮತಿ ನಾಗಮ್ಮಬಾಯಿ ಶ್ರೀ ರಾಮಪ್ಪ ಪವಾರ್ ಮತ್ತು ಮಕ್ಕಳು
ಕುಮಾರಿ ನಳಿನ, Software Engineer U.K.
ಶ್ರೀಮತಿ ಅಂಜಿಕ ಶ್ರೀ ಮಾಲತೇಶ ಪವಾರ್, ಗಣೇಶ ಟ್ರಾನ್ಸ್‌ಪೋರ್ಟ್, ಚಿತ್ರದುರ್ಗ
ಶ್ರೀಮತಿ ರೂಪ ಶ್ರೀ ಸತೀಶ್ ಪವಾರ್, ಶ್ರೀ ಗಣೇಶ್ ಸ್ಟೀಲ್ಸ್ ಅಂಡ್ ಸಿಮೆಂಟ್


ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...

ಪತ್ನಿ : ಸುಮಿತ್ರಬಾಯಿ ಲಕ್ಷ್ಮಣ್ ಪವಾರ್,
ಮಗಳು : ಶ್ರೀಮತಿ ನಂದಿನಿ ಶ್ರೀ ಕೋಟೇಶ್
ಮಗ- ಸೊಸೆ : ಶ್ರೀ ಮಧು ಪವಾರ್ ಶ್ರೀಮತಿ ಸಹನಾ
ಅಮೋಘ, ಪ್ರತೀಕ್, ಪ್ರಣವ್,
ಸಾನಿಕ, ಸಮನ್ವಿ ಪವಾರ್ ಹಾಗೂ ಬಂಧು-ಮಿತ್ರರು



|| ಶ್ರೀ ಕೋಗುಂಡಿ ಬಸವೇಶ್ವರ ಪ್ರಸನ್ನ ||

## ಗೃಹ ಪ್ರವೇಶ ಆಹ್ವಾನ



ಶ್ರೀಮತಿ ಕರಿಬಸಮ್ಮ ಶ್ರೀ ದಿ|| ನಿಟುವಳ್ಳಿ ರಾಮಪ್ಪ
ಇವರ ಕೃಪಾಶೀರ್ವಾದದೊಂದಿಗೆ ದಾವಣಗೆರೆ ತಾಲ್ಲೂಕು, ಜಿಲ್ಲೆ, ಶಾಮನೂರು ವಾಸಿಗಳಾದ
ಶ್ರೀಮತಿ ಶೈಲಜಾ ಎನ್. ವಿಜಯಕುಮಾರ್
ಇವರುಗಳು ಮಾಡುವ ವಿಜ್ಞಾಪನೆಗಳು.

ದಿನಾಂಕ : 19.12.2020ನೇ ಶನಿವಾರ ಬೆಳಿಗ್ಗೆ 7.00 ರಿಂದ 9.00 ರವರೆಗೆ ಶುಭ ಮೂಹೂರ್ತದಲ್ಲಿ
ಸ್ಥಳ : ನೂತನ ಕಾಲೇಜ್ ರೋಡ್, ಆಂಜನೇಯ ಬಡಾವಣೆ, ದಾವಣಗೆರೆ.

ಶ್ರೀ ಬಸವೇಶ್ವರ ಕೃಪ - ಕಾಂಪ್ಲೆಕ್ಸ್ ಗೃಹ ಪ್ರವೇಶ

ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕುಟುಂಬ ಸಮೇತರಾಗಿ ಆಗಮಿಸಿ ನಮ್ಮ ಸತ್ಕಾರವನ್ನು ಸ್ವೀಕರಿಸಿ ಶುಭ ಹಾರೈಸಬೇಕಾಗಿ ವಿನಂತಿ.

ತಮ್ಮ ಆಗಮನಾಭಿಲಾಷಿಗಳು :
ಶ್ರೀಮತಿ ಕರಿಬಸಮ್ಮ ಶ್ರೀ ದಿ|| ನಿಟುವಳ್ಳಿ ರಾಮಪ್ಪ ಮತ್ತು ಮಕ್ಕಳು ಹಾಗೂ ಅಳಿಯಂದಿರು, ಮೊಮ್ಮಕ್ಕಳು
ಶ್ರೀಮತಿ ಸಿದ್ದಮ್ಮ ಶ್ರೀ ನಿಟುವಳ್ಳಿ ಭೀಮಪ್ಪ ಮತ್ತು ಮಕ್ಕಳು, ಸೊಸೆಯಂದಿರು, ನಿಟುವಳ್ಳಿ ವಂಶಸ್ಥರು, ಶಾಮನೂರು.
ಶ್ರೀಮತಿ ಕರಿಬಸಮ್ಮ ಮತ್ತು ಶ್ರೀ ಬಸವರಾಜಪ್ಪ ಮತ್ತು ಮಕ್ಕಳು, ಬಸಾಪುರ., ಶ್ರೀಮತಿ ಶೈಲಜಾ ಶ್ರೀ ಎನ್. ವಿಜಯ್ ಕುಮಾರ್
ವಿನಯ್, ಚೇತನ, ಮುಖೇಶ್, ಅಂಜಲಿ, ನಿತಿನ್ ರಾಜ್ ಹಾಗೂ ಬಂಧು-ಮಿತ್ರರು ಫೋ. : 95386 66369, 94486 89989

ವಿಶೇಷ ಪೂಜೆ : ಶ್ರೀಮತಿ ವಾಣಿ ಶ್ರೀ ವೇದಮೂರ್ತಿ ಸುಬ್ರಹ್ಮಣ್ಯ ಮಧ್ಯಸ್ಥ ಮತ್ತು ತಂಡದವರಿಂದ ವಾಸುಕೀ ಧಾಮ ವಾಸುಕೀ ಸುಬ್ರಹ್ಮಣ್ಯ ದೇವಸ್ಥಾನ, ಸಾಸ್ತಾನ-ಐರೋಡಿ (ಬ್ರಹ್ಮಾವರ) ಉಡುಪಿ. ಇವರಿಂದ ಪೂಜಾ ಕಾರ್ಯಕ್ರಮ



INSIGHTSIAS
SIMPLIFYING IAS EXAM PREPARATION

We Don't Just Guide, We 'EQUIP' You to Succeed

160+ RANKS IN UPSC CSE 2019
5 RANKS IN TOP 10 | 26 RANKS IN TOP 100 | 25 RANKS FROM KARNATAKA



Jatin Kishore – 2nd Rank
Himanshu J. – 4th Rank
Jeydev C. S. – 5th Rank
Abhishek S. – 8th Rank
Sanjita M. – 10th Rank

YOU CAN BE NEXT ON THE LIST!
introducing
INSTACLASSES-2021 FOR UPSC IAS (Prelims + Mains + Interview)
[OGP] ONLINE & OFFLINE GUIDANCE PROGRAM FOR FRESHERS

CLASSES START FROM 7TH DEC 2020
SUBSCRIBE TIMETABLE

FEATURES OF THE OGP PROGRAM
- EQUIP Strategy for your success: Explanation + Quest + Understand + Interact + Perform
- Integrated Course for Prelims + Mains + Interview
- Comprehensive coverage of syllabus including Current Affairs & CSAT
- Ethics & Essay Integrated in the timetable
- Prelims & Mains Test Series with detailed analytics, evaluation and feedback
- Mentorship – Personal guidance to keep track of your progress
- Live & Recorded Classes
- Success & Mindset Coaching

+91 74831 63074
+91 93808 63034
support@insightsias.com
www.insightsonindia.com

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x50 ಪಶ್ಚಿಮ, ಬಾಟ್ಲಿ ಬಿಲ್ಡಿಂಗ್ ಹತ್ತಿರ 30x50 ಉತ್ತರ, ವಾಜಪೇಯಿ ಬಡಾವಣೆಯಲ್ಲಿ 30x40 ಪಶ್ಚಿಮ
ಶಾಮನೂರು ಧನ್ಯಕುಮಾರ್ 97415 62589
ಸ್ವಾಮಿ ಏಜೆಂಟ್, ವಿದ್ಯಾನಗರ 97421 44715

**ಸೈಟ್‌ಗಳು ಮಾರಾಟಕ್ಕಿವೆ**
ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ದಾಟಿ ಹೊಸ ಬನಶಂಕರಿ ಲೇಔಟ್‌ನಲ್ಲಿ 30x50 West, 30x50 East, 40x45 East, 40x62 East, 30x40 West, 40 ಅಡಿ ರೋಡಿಗಿದೆ.
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ 30x40 ಪಶ್ಚಿಮ, 30x50 ಪಶ್ಚಿಮ ವಿನಾಯಕ ಬಡಾವಣೆಯಲ್ಲಿ 30x36 ಉತ್ತರ, ಜೆ.ಹೆಚ್.ಪಟೇಲ್ ಬಡಾವಣೆಯಲ್ಲಿ 20x30 ದಕ್ಷಿಣ
ಸ್ವಾಮಿ, ಏಜೆಂಟ್, ವಿದ್ಯಾನಗರ 97421 44715
ಶಾಮನೂರು ನಾಗರಾಜ್ 98448 83303

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. 'ಬಿ' ಬ್ಲಾಕ್‌ನಲ್ಲಿ, ಕುವೆಂಪು ಬಡಾವಣೆಯಲ್ಲಿ, ಆಂಜನೇಯ ಬಡಾವಣೆಯಲ್ಲಿ 40x60 North, 35x46 ಕಾರ್ನರ್, 30x40 South, 30x50 South
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ 30×40 ಪಶ್ಚಿಮ ಕುವೆಂಪು ಬಡಾವಣೆ ಮನೆಗಳು 20×48 ಪೂರ್ವ, ಆರ್.ಟಿ.ಓ. ರಿಂಗ್ ರೋಡ್ ಸರ್ಕಲ್ ಹತ್ತಿರ 40×60 ಮನೆ, ಪೂರ್ವ ದಿಕ್ಕು, ನಿಜಲಿಂಗಪ್ಪ ಬಡಾವಣೆ ಪಶ್ಚಿಮ-ಪೂರ್ವ ದಿಕ್ಕಿನ ಮನೆಗಳು/ಸೈಟುಗಳು, ಕುವೆಂಪು ಬಡಾವಣೆ ಉತ್ತರ 40×60, ಪಶ್ಚಿಮ, ಸಿದ್ದವೀರಪ್ಪ ಬಡಾವಣೆ ಪಶ್ಚಿಮ, 30×50 ಪೂರ್ವ, ವಿನೋಬನಗರ, ರಿಂಗ್ ರೋಡ್ ಹತ್ತಿರ, 30×40 ಉತ್ತರ.
ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495


# ರೋಗಗಳಿಗೆ ಹೆದರದೆ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕು

## ಹರಪನಹಳ್ಳಿ ಕಾರ್ಯಕ್ರಮದಲ್ಲಿ ನ್ಯಾಯಾಧೀಶರಾದ ಮಂಜುಳಾ ಶಿವಪ್ಪ ಉಂಡಿ ಕಳಕಳಿ




ಹರಪನಹಳ್ಳಿ, ಡಿ.17- ಕೊರೊನಾ ಸೇರಿದಂತೆ ವಿವಿಧ ರೋಗಗಳಿಂದ ಜಗತ್ತಿನ ಶಾಂತಿ ಹದಗೆಟ್ಟಿದ್ದು, ಜನರು ಭಯಭೀತರಾಗದೆ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀಮತಿ ಮಂಜುಳಾ ಶಿವಪ್ಪ ಉಂಡಿ ಅವರು ಕರೆ ನೀಡಿದರು.

ಪಟ್ಟಣದ ತಾಲ್ಲೂಕು ಪಂಚಾಯ್ತಿ ರಾಜೀವ್‌ಗಾಂಧಿ ಸಭಾಂಗಣದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಆರೋಗ್ಯ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರ ಯದಲ್ಲಿ ವಿಶ್ವ ಏಡ್ಸ್ ದಿನಾಚರಣೆ ಕುರಿತು ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಏಡ್ಸ್ ವೈರಸ್‌ನಿಂದ ಬರುವ ಕಾಯಿಲೆಯಾಗಿದ್ದು, ಅದರದೇ ಆದ ಗುಣಲಕ್ಷಣಗಳು ಇರುವುದಿಲ್ಲ. ಏಡ್ಸ್ ಬಂದನಂತರ ನಮ್ಮಲ್ಲಿರುವ ರೋಗ ನಿರೋಧಕ ಶಕ್ತಿ ಕುಂದಿಸುತ್ತದೆ. ಕನಿಷ್ಠ 4 ವರ್ಷಗಳಲ್ಲಿ ರೋಗದ ಲಕ್ಷಣಗಳು ಗೋಚರಿಸುತ್ತವೆ. ಅನೈತಿಕ ಸಂಪರ್ಕದಿಂದ, ಬಳಸಿದ ಸಿರಿಂಜ್‌ಗಳಿಂದ ಹರಡುವ ಸಾಧ್ಯತೆ ಇದ್ದು, ಗುಣ ಲಕ್ಷಣಗಳು ಕಂಡ ಕೂಡಲೇ ಸರಿಯಾದ ವೈದ್ಯಕೀಯ ಚಿಕಿತ್ಸೆ ಪಡೆದಲ್ಲಿ ಆಯುಷ್ಯವನ್ನು ಹೆಚ್ಚಿಸಿಕೊಳ್ಳಬಹುದೇ ಹೊರತು ಸಂಪೂರ್ಣ ಗುಣಮುಖರಾಗಲು ಸಾಧ್ಯವಿಲ್ಲ ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬಿ. ಮಾಲುಂಬಿ ಮಾತನಾಡಿ, ಕೊರೊನಾ ರೋಗದ ಮುಂದೆ ಇತರೆ ರೋಗಗಳ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿದ್ದೇವೆ. ಏಡ್ಸ್ ರೋಗದ ವಿರುದ್ಧ ಸಾರ್ವಜನಿಕರಲ್ಲಿ ಮೌಢ್ಯತೆ ಹೋಗಲಾಡಿಸಿ ಅರಿವು ಮೂಡಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದ್ದು, ರೋಗದ ವಿರುದ್ಧ ಹೋರಾಟ ಮಾಡಬೇಕೇ ವಿನಃ ರೋಗಿಯ ವಿರುದ್ಧ ಅಲ್ಲ, ಅವರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಆಗಬೇಕು ಎಂದರು.

ಸಾರ್ವಜನಿಕ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಶಿವಕುಮಾರ, ಆಪ್ತ ಸಮಾಲೋಚಕ ಜಿ.ಎ. ಮಲ್ಲಿಕಾರ್ಜುನ ಮಾತನಾಡಿದರು.

ಕಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಜಿ. ಶೋಭಾ, ವಕೀಲರ ಸಂಘದ ಅಧ್ಯಕ್ಷ ಕೆ. ಚಂದ್ರೇಗೌಡ್ರು, ವಕೀಲರಾದ ಡಿ. ಹನುಮಂತಪ್ಪ, ಬಾಗಳಿ ಎಸ್. ಮಂಜುನಾಥ, ಗುಡದಯ್ಯ, ಎ.ಎಲ್. ರೇವಣಸಿದ್ದಪ್ಪ ಇನ್ನಿತರರಿದ್ದರು.


**ಬಾಡಿಗೆಗೆ ಇದೆ**
8ನೇ ಮೇನ್, 8ನೇ ಕ್ರಾಸ್, ಪಿ.ಜೆ. ಬಡಾವಣೆಯಲ್ಲಿ ಆಫೀಸ್, ಕ್ಲಿನಿಕ್‌ಗೆ 22x26 ಅಳತೆಯ ರೂಂ ಫಸ್ಟ್ ಫ್ಲೋರ್‌ನಲ್ಲಿ (ಬೆಳಗಾವಿ ಆರ್ಕೇಡ್) ಬಾಡಿಗೆಗೆ ಇದೆ.
97399 50780
82177 21635

**ಮಾಲೀಕರಿಂದ ಮನೆಗಳು/ ಸ್ಕೂಲ್‌ಗಳು ಬಾಡಿಗೆಗೆ/ಲೀಸ್‌ಗೆ ಇವೆ**
ಮಿಟ್ಲಕಟ್ಟೆ/ಮಾಗಾನಹಳ್ಳಿ/ಸ್ಕೂಲ್ ಬಾಡಿಗೆಗೆ/ಲೀಸ್‌ಗೆ ಇವೆ.
ದೇವರಾಜ ಅರಸು ಬಡಾವಣೆ/ನಿಟುವಳ್ಳಿ ಮನೆಗಳು/ಬಾಡಿಗೆ/ಲೀಸ್‌ಗೆ ಇವೆ.
ಹೊಸ ಆರ್‌ಟಿಓ ಆಫೀಸ್ ಹತ್ತಿರ ಮನೆಗಳು/ ಆಫೀಸ್ ಬಾಡಿಗೆ/ಲೀಸ್‌ಗೆ ಇವೆ
73493 97287, 99028 55272

**ಮನೆ ಬಾಡಿಗೆಗಿದೆ**
ಆಂಜನೇಯ ಬಡಾವಣೆ 14 ನೇ ಕ್ರಾಸ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ 2 BHK ಇರುವ ಸುಸಜ್ಜಿತ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ.
98445-83442

**ಶಾಪ್ & ವಾಸ್ತು ಮನೆ ಬಾಡಿಗೆಗೆ**
ಪೂರ್ವ ಮುಂಬಾಗಿಲಿನ, ಗ್ರೌಂಡ್ ಫ್ಲೋರ್ ಶಾಪ್ & 2 & 3 ಬೆಡ್ ರೂಂ, ಡೈನಿಂಗ್ ಹಾಲ್, ನೀರಿನ ಸೌಕರ್ಯ, ಪಾರ್ಕಿಂಗ್, ಮನೆ ಬಾಡಿಗೆಗೆ ಇದೆ. 8ನೇ ಮುಖ್ಯ ರಸ್ತೆ, 8ನೇ ಅಡ್ಡ ರಸ್ತೆ, #408, ಸಮೃದ್ಧಿ ನಿಲಯ, ಪಿ.ಜೆ.ಬಡಾವಣೆ, ಮೋದಿ ಕಾಂಪೌಂಡ್ ಹತ್ತಿರ.
93807 97651
95386 41980

**ಸೈಟ್ ಬೇಕಾಗಿದೆ**
ದಾವಣಗೆರೆ ಸಿಟಿ ವ್ಯಾಪ್ತಿಯಲ್ಲಿ ಫೈನಲ್ ಅಪ್ರೂಲ್, 20x40, 30x40 ಸೈಟ್ ಬೇಕಾಗಿದ್ದು, ಮಾರುವವರು ಇದ್ದಲ್ಲಿ ನೇರವಾಗಿ ಸಂಪರ್ಕಿಸಿ, (ಶಂಕರ್ ವಿಹಾರ ಬಡಾವಣೆ, ಪಿಸಾಳೆ ಕಾಂಪೌಡ್)
94822 44041

**ಬೇಕಾಗಿದ್ದಾರೆ**
ಹಾರ್ಡ್‌ವೇರ್ ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. 18 ರಿಂದ 20 ವಯಸ್ಸಿನ ಆಸಕ್ತರು ಸಂಪರ್ಕಿಸಿ:
98443 12234

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ತಕ್ಷಣ ಸಂಪರ್ಕಿಸಿ :
96117-44810

**ಬೇಕಾಗಿದ್ದಾರೆ**
ಬೆಣ್ಣೆ ದೋಸೆ ಮಾಡುವರು ಬೇಕಾಗಿದ್ದಾರೆ. ಆಕರ್ಷಕ ಸಂಬಳ, ವಸತಿ ಸೌಲಭ್ಯ ನೀಡಲಾಗುವುದು. ಸಂಪರ್ಕಿಸಿರಿ
94495 58023

**ಬೇಕಾಗಿದ್ದಾರೆ**
ಹೋಟೆಲ್/ಡಾಬಾಕ್ಕೆ ಕೆಲಸಗಾರರು
ಕ್ಲೀನರ್ಸ್ - 5 ರಿಂದ 6 ಸಾವಿರ,
ಸಪ್ಲೈಯರ್ಸ್ - 8 ರಿಂದ 10 ಸಾವಿರ,
ಕುಕ್ - 12 ರಿಂದ 16 ಸಾವಿರ
(ಉಚಿತ ಊಟ, ವಸತಿ ಸೌಲಭ್ಯ ಕೊಡಲಾಗುವುದು).
89516 67998

**ಬಾಡಿಗೆಗೆ**
12 ರೂಂಗಳಿರುವ ಕಟ್ಟಡ P.G., ಹಾಸ್ಟೆಲ್ ಇತರೆಗೆ ಬಾಡಿಗೆಗೆ ಇದೆ ವಿಚಾರಿಸಿ
82774 81196

**FOR SALE**
15 Computer (Led display)
Contact:
80951 15500

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 18 ರಿಂದ 25 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಊಟ, ವಸತಿ ಸೌಲಭ್ಯವಿರುತ್ತದೆ.
98442-94446

NGO ವಿದ್ಯಾಸಂಸ್ಥೆ, ಮಹಿಳಾ ಸಂಘ, ಸ್ವ-ಸಹಾಯ ಸಂಘಗಳ ನವೀಕರಣ, TRUST Registration ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ:
MEGHANA ASSOCIATES (R)
99809 16126

**ಬೇಕಾಗಿದ್ದಾರೆ**
ಪ್ರತಿದಿನ ಸಂಜೆ 5.30ರಿಂದ ಬೆಳಿಗ್ಗೆ 8.30ರವರೆಗೆ ವಯಸ್ಸಾದವರನ್ನು ನೋಡಿಕೊಳ್ಳಲು ಹೆಣ್ಣುಮಕ್ಕಳು ಬೇಕಾಗಿದ್ದಾರೆ. *ಸಂಪರ್ಕಿಸಿ :*
98440-63507

**ಬಾಡಿಗೆಗೆ/ಭೋಗ್ಯಕ್ಕೆ**
ದಾವಣಗೆರೆಯಲ್ಲಿ ಸರ್ಕಿಟ್ ಹೌಸ್, P.B. ರಸ್ತೆ ಹತ್ತಿರ ಗಾರ್ಡನ್ ಕೆಫೆ, ಪ್ರವಾಸಿ, ಟ್ರಾನ್ಸ್‌ಪೋರ್ಟ್ ಬುಕ್ಕಿಂಗ್‌ಗೆ, ಸೋಲಾರ್, ಪಾರ್ಕಿಂಗ್ ಸೌಲಭ್ಯದ ಎರಡು ಮಳಿಗೆಗಳು ತಕ್ಷಣ ದೊರೆಯುತ್ತವೆ.
94800 00417 / 83107 76233

**ಬೇಕಾಗಿದ್ದಾರೆ**
ಬೆಳ್ಳಿ-ಬಂಗಾರದ ಅಂಗಡಿಯಲ್ಲಿ ಕೆಲಸಕ್ಕೆ ಯುವಕ-ಯುವತಿಯರು ಬೇಕಾಗಿದ್ದಾರೆ. ಅನುಭವ ಇದ್ದರೆ ಆದ್ಯತೆ.
98445-83442

**ಕೆಲಸಗಾರರು ಬೇಕಾಗಿದ್ದಾರೆ**
ವಿನಾಯಕ ಸಾರಿಗೆ ಸಂಸ್ಥೆಯಲ್ಲಿ ಚಾಲಕ ಹಾಗೂ ನಿರ್ವಾಹಕ ಹುದ್ದೆಗೆ ಕೆಲಸಗಾರರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು (ಪುರುಷರಿಗೆ/ಮಹಿಳೆಯರಿಗೆ ಆದ್ಯತೆ)
94824 76109
91642 22937

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482


# ಹಳೇ ಕುಂದುವಾಡದಲ್ಲಿ ಕೊರೊನಾ ವಾರಿಯರ್ಸ್‌ಗಳಿಗೆ ಗೌರವ





## ಮನಾ ಯುವ ಬ್ರಿಗೇಡ್‌ನಿಂದ ಕಾರ್ಯಕ್ರಮ

ದಾವಣಗೆರೆ, ಡಿ.17- ಒಬ್ಬರ ಮುಖ ಒಬ್ಬರು ನೋಡದಂತಹ ಸಂದರ್ಭದಲ್ಲಿ ಕೊರೊನಾ ಸೋಂಕಿತರ ಜೊತೆಗೆ ಇದ್ದು, ಚಿಕಿತ್ಸೆ ನೀಡಿ ಗುಣಪಡಿಸುತ್ತಿರುವ ಕೊರೊನಾ ವಾರಿಯರ್ಸ್ ಸೇವೆ ನಿಜಕ್ಕೂ ಅವಿಸ್ಮರಣೀಯ ಎಂದು ಮಹಾಪೌರ ಬಿ.ಜಿ.ಅಜಯ್ ಕುಮಾರ್ ಬಣ್ಣಿಸಿದರು.

ಹಳೇ ಕುಂದುವಾಡದಲ್ಲಿ ಮನಾ ಯುವ ಬ್ರಿಗೇಡ್ ಹಾಗೂ ಜನತಾ ರಕ್ಷಣಾ ವೇದಿಕೆಯಿಂದ ಹಮ್ಮಿಕೊಂಡಿದ್ದ ಥ್ಯಾಂಕ್ಯೂ ಕುಂದುವಾಡ ಕೊರೊನಾ ವಾರಿಯರ್ಸ್ ಅಭಿನಂದನಾ ಸಮಾರಂಭದಲ್ಲಿ ವಾರಿಯರ್ಸ್‌ಗಳನ್ನು ಸನ್ಮಾನಿಸಿ ಅವರು ಮಾತನಾಡಿದರು.

ಆಶಾ ಕಾರ್ಯಕರ್ತೆಯರು, ವೈದ್ಯರು, ಪೊಲೀಸರು ತಮ್ಮ ಪ್ರಾಣದ ಹಂಗು ತೊರೆದು ಸೇವೆ ಮಾಡಿದ್ದು ನಿಜಕ್ಕೂ ಸ್ಮರಣೀಯ. ನಾವೂ ಕೂಡ ಪಾಲಿಕೆಯಿಂದ ಕಿಟ್ ಸೇರಿದಂತೆ, ಇನ್ನಿತರೆ ಸೇವೆಗಳ ಮೂಲಕ ಜನರ ಕಷ್ಟಕ್ಕೆ ಸ್ಪಂದಿಸುವ ಕೆಲಸ ಮಾಡಿದ್ದೇವೆ ಎಂದು ಮೇಯರ್ ತಿಳಿಸಿದರು.

ಸಮಾರಂಭದಲ್ಲಿ ಕುಂದುವಾಡದವರೇ ಆದ ಆಶಾ ಕಾರ್ಯಕರ್ತೆಯರು, ಆರೋಗ್ಯ ಇಲಾಖೆ ಅಧಿಕಾರಿಗಳು, ನರ್ಸ್‌ಗಳು, ಪೊಲೀಸ್ ಹಾಗೂ ಪತ್ರಕರ್ತರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಹಳೇ ಕುಂದುವಾಡದಲ್ಲಿ ಶಾಂತಿನಗರ, ಜನತಾ ಕ್ಯಾಂಪ್, ಗಡಿ ಕ್ಯಾಂಪ್ ರಸ್ತೆ ನಿರ್ಮಾಣ ಹಾಗೂ ಕುಂದುವಾಡ ರುದ್ರಭೂಮಿ ಅಭಿವೃದ್ಧಿಪಡಿಸುವಂತೆ, ಜೊತೆಗೆ ಹೈವೇ ಬ್ರಿಡ್ಜ್ ನಿರ್ಮಾಣ, ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಸಬ್‌ಸೆಂಟರ್ ಹಳೇ ಕುಂದುವಾಡದಲ್ಲಿ ಪಾಳು ಬಿದ್ದಿದ್ದು, ದುರಸ್ತಿ ಮಾಡಿಕೊಡಬೇಕು ಹಾಗೂ ಗ್ರಂಥಾಲಯ ಸ್ಥಾಪನೆ ಮಾಡಿಕೊಡಬೇಕು ಎಂದು ಮನಾ ಯುವ ಬ್ರಿಗೇಡ್‌ನಿಂದ ಮಹಾಪೌರರಾದ ಅಜಯ್ ಕುಮಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಮನಾ ಯುವ ಬ್ರಿಗೇಡ್ ಅಧ್ಯಕ್ಷ ಮಧು ನಾಗರಾಜ್ ಕುಂದುವಾಡ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪಾಲಿಕೆ ಸದಸ್ಯರಾದ ಶಿಲ್ಪಾ ಜಯಪ್ರಕಾಶ್, ಮಾಜಿ ಮೇಯರ್ ಹೆಚ್. ಎನ್.ಗುರುನಾಥ್, ಎಪಿಎಂಸಿ ಮಾಜಿ ಅಧ್ಯಕ್ಷ ಹೆಚ್.ಜಿ.ಗಣೇಶಪ್ಪ, ಮಾಜಿ ಕಾರ್ಪೊರೇಟರ್ ಹೆಚ್.ತಿಪ್ಪಣ್ಣ, ಜಿಲ್ಲಾ ಫಾರ್ಮಸಿ ಅಧಿಕಾರಿ ಶಿವಾನಂದ ದಳವಾಯಿ, ಮುಖಂಡರುಗಳಾದ ಮಿಟ್ಲಕಟ್ಟೆ ಚಂದ್ರಪ್ಪ, ನರಸಪ್ಪರ ಶಿವಪ್ಪ, ಹನುಮಂತಪ್ಪ, ಜೆ.ಸಿ.ದೇವರಾಜ್, ಎನ್. ಟಿ.ನಾಗರಾಜ್, ಪತ್ರಕರ್ತ ಬಸವರಾಜ್ ದೊಡ್ಮನಿ, ರಾಜು ಕರೂರು ಸೇರಿದಂತೆ ಮತ್ತಿತರರಿದ್ದರು.

# ಹರಿಹರದ ಬಳಿ ಕಾರು ಪಲ್ಟಿ: ಓರ್ವ ಸಾವು

ಹರಿಹರ,ಡಿ.17- ಇಲ್ಲಿಗೆ ಸಮೀಪದ ಪಿ.ಬಿ. ರಸ್ತೆಯಲ್ಲಿ ಇಂದು ರಾತ್ರಿ 8.30ರ ಸಮಯದಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಓರ್ವ ಸ್ಥಳದಲ್ಲೇ ಸಾವಿಗೀಡಾಗಿರುವ ಘಟನೆ ನಡೆದಿದೆ.

ಮೃತನನ್ನು ಹಿರೇಕೆರೂರಿನ ದೇವರಾಜ್ ಎಂದು ಗುರುತಿಸಲಾಗಿದೆ. ಸುಮಾರು 32 ವರ್ಷ ವಯಸ್ಸಿನ ದೇವರಾಜ್, ಕಳೆದ ಒಂದೂವರೆ ವರ್ಷಗಳ ಹಿಂದಷ್ಟೇ ಮದುವೆಯಾಗಿದ್ದು, ಮೂರು ತಿಂಗಳ ಮಗು ಇದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೇವರಾಜ್, ದಾವಣಗೆರೆ ಕಡೆಯಿಂದ ನಗರದತ್ತ ಕೆಎ 27- ಬಿ 9229 ಸಂಖ್ಯೆಯ ಕಾರನ್ನು ಚಲಾಯಿಸಿಕೊಂಡು ಬರುತ್ತಿದ್ದ ಸಂದರ್ಭದಲ್ಲಿ ನಿಯಂತ್ರಣ ತಪ್ಪಿದ ಪರಿಣಾಮ ಕಾರು ಮೂರು ಬಾರಿ ಪಲ್ಟಿಯಾಗಿ ಈ ದುರಂತ ನಡೆದಿದೆ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ. ಕಾರಿನಲ್ಲಿ ದೇವರಾಜ್ ಮಾತ್ರ ಇದ್ದರೆಂದು ಹೇಳಲಾಗಿದೆ.

ದೇವರಾಜ್ ಮೊಬೈಲ್ ಫೋನ್ ನಲ್ಲಿ ಮಾತನಾಡುವುದರ ಜೊತೆಗೆ ವೇಗವಾಗಿ ಕಾರು ಚಲಾಯಿಸುತ್ತಿದ್ದ ಪರಿಣಾಮಲವೇ ಕಾರು ನಿಯಂತ್ರಣಕ್ಕೆ ಬಾರದಿರಲು ಕಾರಣ ಎಂದು ಪೊಲೀಸರು ಊಹಿಸಿದ್ದಾರೆ.

ವಿಷಯ ತಿಳಿದೊಡನೆ ಹರಿಹರ ಗ್ರಾಮಾಂತರ ಠಾಣೆ ಸಬ್ ಇನ್ ಸ್ಪೆಕ್ಟರ್ ರವಿಕುಮಾರ್, ಸಾಮಾಜಿಕ ಸೇವಾ ಕಾರ್ಯಕರ್ತ ಎಂ.ಆರ್. ಸೈಯದ್ ಸನಾವುಲ್ಲಾ, ಅಂಬ್ಯುಲೆನ್ಸ್ ಚಾಲಕ ಮೊಹಮ್ಮದ್ ಅಲಿ ಅವರುಗಳು ಶವವನ್ನು ಇಲ್ಲಿನ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದರು.

# ನೀಲಾನಹಳ್ಳಿ : ನಾಳೆ ಆಂಜನೇಯಸ್ವಾಮಿ ಕಾರ್ತಿಕೋತ್ಸವ

ದಾವಣಗೆರೆ, ಡಿ.17- ಇಲ್ಲಿಗೆ ಸಮೀಪದ ಶ್ರೀ ಕ್ಷೇತ್ರ ನೀಲಾನಹಳ್ಳಿ ಶ್ರೀ ಆಂಜನೇಯಸ್ವಾಮಿ ಕಡೇ ಕಾರ್ತಿಕೋತ್ಸವವು ನಾಡಿದ್ದು ದಿನಾಂಕ 19 ರ ಶನಿವಾರ ರಾತ್ರಿ 8.30ಕ್ಕೆ ಜರುಗಲಿದೆ ಎಂದು ಕನ್ವೀನರ್ ಎನ್.ಎಂ. ಆಂಜನೇಯ ಗುರೂಜಿ ತಿಳಿಸಿದ್ದಾರೆ.

# ನ್ಯಾಮತಿ ಕಾಂಗ್ರೆಸ್‌ಗೆ ವಾಗೀಶ್ ಅಧ್ಯಕ್ಷ



ನ್ಯಾಮತಿ, ಡಿ.17 - ತಾಲ್ಲೂಕು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ನ್ಯಾಮತಿ ನುಚ್ಚಿನ ವಾಗೀಶ್ ಆಯ್ಕೆಯಾಗಿದ್ದಾರೆ. ಸಭೆಯಲ್ಲಿ ಮಾಜಿ ಶಾಸಕ ಶಾಂತನಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮಂಜಪ್ಪ, ಹೊನ್ನಾಳಿ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷ ಸಣ್ಣಕ್ಕಿ ಬಸವನಗೌಡ, ಸಾಸ್ವೆಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗದುಗೇಶ್ ಹಾಗೂ ಪಕ್ಷದ ಪ್ರಮುಖರು ಹಾಜರಿದ್ದರು.




# ಕೊಮಾರನಹಳ್ಳಿ ದೇವಸ್ಥಾನದಲ್ಲಿ ನಾಗರ ಹಾವು ಪ್ರತ್ಯಕ್ಷ

ಮಲೇಬೆನ್ನೂರು,ಡಿ.17- ಸಮೀಪದ ಕೊಮಾರನಹಳ್ಳಿಯ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ದೇವಸ್ಥಾನದಲ್ಲಿ ಇಂದು ಪ್ರಾರಂಭವಾದ ಧನುರ್ಮಾಸದ ಗುರುವಾರದಂದು ದೇವಸ್ಥಾನದಲ್ಲಿ ಕಾಣಿಸಿಕೊಂಡಿದ್ದ ನಾಗರಹಾವನ್ನು ಸುರಕ್ಷಿತವಾಗಿ ಅರಣ್ಯ ಪ್ರದೇಶಕ್ಕೆ ಬಿಡಲಾಯಿತು. ಈ ಸಮಯದಲ್ಲಿ ಅರ್ಚಕರು ಮತ್ತು ಗ್ರಾಮಸ್ಥರಾದ ಯು.ನಾಗರಾಜ್, ಜಿ. ರಂಗನಾಥ್, ಸಿ.ರಂಗನಾಥ್, ಜಿ.ಸುನಿಲ್ ಇದ್ದರು.


# ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

॥ ಶ್ರೀ ಬಸವೇಶ್ವರ ಪ್ರಸನ್ನ ॥





ದಾವಣಗೆರೆ ತಾಲ್ಲೂಕು ಹಳೇಬಿಸಲೇರಿ ಗ್ರಾಮದ ವಾಸಿ ಲಿಂ. ಶರಣ ಬಿ. ಮಹೇಶ್ವರಪ್ಪನವರ ಧರ್ಮಪತ್ನಿ
**ಶರಣೆ ರೇಣುಕಮ್ಮ ಮತ್ತು ಮಕ್ಕಳು ಹಾಗೂ**
**ಶರಣ ಕುಂದೂರು ಸಿದ್ಧಲಿಂಗಪ್ಪ ಮತ್ತು ಸಹೋದರರು**
ಇವರುಗಳು ಮಾಡುವ ವಿಜ್ಞಾಪನೆಗಳು.

ಶರಣ ಬಂಧುಗಳೇ, ದಿನಾಂಕ 21.11.2020ನೇ ಶನಿವಾರ ಸಂಜೆ 6-30ಗಂಟೆಗೆ ನನ್ನ ಪೂಜ್ಯ ಪತಿಯವರಾದ



ಜನನ : 10-4-1941
ಮರಣ : 21-11-2020

## ಶರಣ ಬಿ. ಮಹೇಶ್ವರಪ್ಪನವರು

ನಿವೃತ್ತ ಸಹಾಯಕ ಶಿಕ್ಷಣಾಧಿಕಾರಿಗಳು, ಮಾಜಿ ಉಪಾಧ್ಯಕ್ಷರು, ಮುದಹದಡಿ ಗ್ರಾಮ ಪಂಚಾಯಿತಿ ಹಾಗೂ ಮಾಜಿ ಅಧ್ಯಕ್ಷರು, ವಿ.ಎಸ್.ಎಸ್.ಎನ್. ನಾಗನೂರು, ಹಳೇಬಿಸಲೇರಿ, ದಾವಣಗೆರೆ.

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

## ಕೈಲಾಸ ಶಿವಗಣಾರಾಧನೆಯನ್ನು

**ದಿನಾಂಕ 19-12-2020ನೇ ಶನಿವಾರ ಬೆಳಿಗ್ಗೆ 10-30 ಕ್ಕೆ**
**ಶ್ರೀಮತಿ ಗೌರಮ್ಮ ಕುಂದೂರು ವೀರಭದ್ರಪ್ಪ ಸಮುದಾಯ ಭವನ, ಹಳೇಬಿಸಲೇರಿ**
ದಾವಣಗೆರೆ ತಾಲ್ಲೂಕು, ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಲು ಪ್ರಾರ್ಥಿಸುತ್ತೇವೆ.

ಇಂತಿ ದುಃಖತಪ್ತರು,
ಶರಣೆ ರೇಣುಕಮ್ಮ ಬಿ. ಮಹೇಶ್ವರಪ್ಪ ಮಕ್ಕಳಾದ
ಶರಣೆ ವನಿತ ಮತ್ತು ಶರಣ ಕುಮಾರಸ್ವಾಮಿ ಹಾಗೂ ಮಕ್ಕಳು
ಶರಣೆ ಡಾ॥ ಆಶಾ ಮತ್ತು ಶರಣ ಡಾ॥ ಬಿ.ಎಂ. ಪ್ರಭು ಹಾಗೂ ಮಕ್ಕಳು
ಶರಣೆ ಗೌರಮ್ಮ ಮತ್ತು ಲಿಂ॥ ಕುಂದೂರು ವೀರಭದ್ರಪ್ಪ ಹಾಗೂ ಮಕ್ಕಳು, ಅಳಿಯಂದಿರು, ಸೊಸೆಯಂದಿರು
ಶರಣೆ ಸಿದ್ದಮ್ಮ ಮತ್ತು ಶರಣ ಕೆ.ಎಂ. ಸಿದ್ಧಲಿಂಗಪ್ಪ ಹಾಗೂ ಮಕ್ಕಳು, ಅಳಿಯಂದಿರು, ಸೊಸೆಯಂದಿರು
ಶರಣೆ ಯಶೋಧಮ್ಮ ಮತ್ತು ಶರಣ ಕೆ.ಎಂ. ಶಿವಣ್ಣ ಹಾಗೂ ಮಕ್ಕಳು, ಅಳಿಯಂದಿರು, ಸೊಸೆಯಂದಿರು
ಶರಣೆ ಮಹಾದೇವಮ್ಮ ಮತ್ತು ಲಿಂ॥ ಬಿ. ಬಸವರಾಜಪ್ಪ ಹಾಗೂ ಮಕ್ಕಳು, ಅಳಿಯಂದಿರು, ಸೊಸೆಯಂದಿರು
ಕುಂದೂರು ವಂಶಸ್ಥರು, ಹಳೇ ಬಿಸಲೇರಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.

Mobile 98443 55716, 98450 15507, 99866 12304, 94480 46845, 70195 65564, 96117 66389

ವಿ.ಸೂ.: ಈಗಾಗಲೇ ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಲಾಗಿದೆ.

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೊಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**HOUSE FOR RENT**
for Office / Bank / Commercial purpose, 4 bedroom house with 2 attached bathroom. Car parking facility. Opp. Dell Showroom, 7th Main, P.J. Extn, Davangere. 1 Shop, Atani College Road, S.S. layout. Contact :
Dr. Narayan 8618725056

**JOBS**
MCS ACADEMY
Training & Placement Cell
98444 92888

**ಬೇಕಾಗಿದ್ದಾರೆ**
ದಾವಣಗೆರೆಯ ಶರಭೇಶ್ವರ ಊಟದ ಹೋಟೆಲ್ ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಪರಸ್ಥಳದವರಿಗೆ ಉಚಿತ ಊಟ, ವಸತಿ ಸೌಲಭ್ಯ ಕಲ್ಪಿಸಲಾಗುವುದು. ಸಂಪರ್ಕಿಸಿ
94489 80070
78991 90070

**WANTED**
MARKETING EXECUTIVE for Fitness Equipments, ITI Diploma, SALES SKILL, BASIC COMPUTER KNOWLEDGE. Must Own Bike/Two Wheeler.
Whatsapp Resume :
86183 24082

GST Registration, INCOME TAX & GST CASES, Project Reports, and for Account Maintenances. Contact
MEGHANA ASSOCIATES (R)
99809 16126

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಲ್ಲಿ ರೂಂ ಬಾಯ್ ಮತ್ತು ಸೂಪರ್‌ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. *ಸಂಪರ್ಕಿಸಿ :*
98440-63507

**ಮನೆ ಬಾಡಿಗೆಗೆ ಇದೆ**
2ನೇ ಮೇನ್, 5ನೇ ಕ್ರಾಸ್, ಲತಾ ಬೇಕರಿ ಹಿಂಭಾಗ, ಕೊಂಡಜ್ಜಿ ರಸ್ತೆ, ವಿಜಯನಗರ ಬಡಾವಣೆ, ದಾವಣಗೆರೆ.
63638 78892

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
S.S.L.C., PUC, Technical & Non Technical Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ದಾವಣಗೆರೆ.
87490 24789, 94837 64859, 87620 58369
82173 02649, 80507 27467

**ಮನೆಯ ಮೂಲ ಪತ್ರ ಕಳೆದಿರುತ್ತದೆ**
ಹೆಚ್. ರಾಮಚಂದ್ರಪ್ಪ ಬಿನ್ ಅಜ್ಜಪ್ಪರ ಹಾಲಪ್ಪ, ಲಿಂಗರಾಜ ಬಿನ್ ಹೆಚ್.ರಾಮಚಂದ್ರಪ್ಪ , ಪರಶುರಾಮ ಬಿನ್ ಹೆಚ್. ರಾಮಚಂದ್ರಪ್ಪನವರುಗಳ ಹೆಸರಿನಲ್ಲಿ ಜಂಟಿ ಖಾತೆ ಇದ್ದು, #72/2-65, ಖಾತೆ ನಂ.212ವುಳ್ಳ ಈ ಸ್ವತ್ತಿನ ದಾಖಲೆಗಳು ದಿನಾಂಕ 15-12-2020 ರಂದು ಕೆ ಎಸ್ ಆರ್ ಟಿ ಸಿ ಬಸ್ಟಾಂಡ್ ಹತ್ತಿರ ಆಟೋದಲ್ಲಿ ಹೋಗುತ್ತಿರುವಾಗ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನಿಗೆ ತಿಳಿಸಲು ಕೋರಿದೆ. ಸಂಪರ್ಕಿಸಿ:
ಮೊ: 90354 93711

State Bank of India
**ಗ್ರಾಹಕರ ಸೇವಾ ಕೇಂದ್ರದಲ್ಲಿ**
ಜನ್‌ಧನ್ ಖಾತೆ ಮಾಡಲಾಗುತ್ತದೆ ('0' Account Open)
#264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005

**ಕೌಶಲ್ಯ ತರಬೇತಿ**
ವೇದಾಂತ ಫೌಂಡೇಷನ್ ವತಿಯಿಂದ S.S.L.C., PUC ಮತ್ತು ಯಾವುದೇ ಡಿಗ್ರಿ ಪಾಸ್ ಆದ ವಿದ್ಯಾರ್ಥಿಗಳಿಗೆ ಅವರ ಶಿಕ್ಷಣಕ್ಕೆ ಅನುಗುಣವಾಗಿ ಸ್ಕಿಲ್ ಟ್ರೈನಿಂಗ್ ನೀಡಿ ಅವರಿಗೆ ಹೆಸರಾಂತ ಕಂಪನಿಗಳಲ್ಲಿ JOb Placemnt (ಉದ್ಯೋಗ ಅವಕಾಶವನ್ನು) ಒದಗಿಸುತ್ತೇವೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
90667 66580, 85532 59527

**ಕುರಿ ಸಾಕಾಣಿಕೆ ಜಾಗ ಬಾಡಿಗೆಗೆ ದೊರೆಯುತ್ತದೆ**
ದೊಡ್ಡಬಾತಿ ಬಳಿ 3100 ಚ.ಅಡಿಯ ಶೆಡ್, 1.5 ಎಕರೆ ನೀರಾವರಿ ಜಮೀನು, ಬೋರ್‌ವೆಲ್ ನೀರಿನ ಅನುಕೂಲವಿರುವ, ಕಾಂಕ್ರೀಟ್ ರಸ್ತೆ, ದಾವಣಗೆರೆ ಸಿಟಿಯಿಂದ 9 ಕಿ.ಮೀ ದೂರ ಈ ಎಲ್ಲಾ ಅನುಕೂಲತೆ ಇರುವ ಜಾಗ ಬಾಡಿಗೆಗೆ ದೊರೆಯುತ್ತದೆ.
94484 90778, 96867 62778

# ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ವಾಸಿ
**ಶ್ರೀಮತಿ ಗಂಗಮ್ಮ ಗುಂಡಪ್ಪ ನಾಗೂರು ಮತ್ತು ಚಂದ್ರಶೇಖರ ಎನ್.ಜಿ.**
ಇವರು ಮಾಡುವ ಶರಣು ಶರಣಾರ್ಥಿಗಳು.
ದಿನಾಂಕ 11.12.2020 ರ ಶುಕ್ರವಾರ
ನನ್ನ ಅಣ್ಣನಾದ
**ಶರಣ ಅಮರೇಶ್ ಎನ್.ಜಿ.**
ಇವರು ಲಿಂಗೈಕ್ಯರಾದ ಪ್ರಯುಕ್ತ ಲಿಂಗೈಕ್ಯರ ಆತ್ಮಶಾಂತಿಗಾಗಿ
**ಶಿವಗಣಾರಾಧನೆಯನ್ನು**

ದಿನಾಂಕ 19-12-2020ನೇ ಶನಿವಾರ ಬೆಳಿಗ್ಗೆ 11 ಕ್ಕೆ ದಾವಣಗೆರೆ ಲಿಂಗೈಕ್ಯರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು
ಲಿಂಗೈಕ್ಯರ ಧರ್ಮಪತ್ನಿ : ಬಸಮ್ಮ ಮತ್ತು ಮಕ್ಕಳು
ತಾಯಿ : ಗಂಗಮ್ಮ ಎನ್.ಜಿ. ಚಂದ್ರಶೇಖರ, ಮಂಜುಳ ಎನ್.ಜಿ. ಹಾಗೂ ಬಂಧು ಮಿತ್ರರು.
#1632/2A ಶ್ರೀ ಮೈಲಮ್ಮ ದೇವಸ್ಥಾನದ ಪಕ್ಕ, ಹಗೆದಿಬ್ಬ ಸರ್ಕಲ್ ಹತ್ತಿರ, ದಾವಣಗೆರೆ-577001. ಮೊ: 90666 22423

**WANTED TEACHERS**
No of Posts :
1) BSc BEd(CBZ ) -01
2) D.Ed/NTC/BSc/B.Com -02
3) BPEd/CPEd -01
NISARGA CONVENT & HIGH SCHOOL
SOG Badavane, Davangere.
99862 26454, 98444 43374

**'ಬೋರ್ ವೆಲ್ ಪಾಯಿಂಟ್'...?**
ಅತ್ಯುತ್ತಮ ಬೋರ್ ಪಾಯಿಂಟ್‌ಗಾಗಿ
ಜಯಚಂದ್ ಜೈನ್
ಅಂತರ್ಜಲ ಶೋಧಕರು
98445-83442

**ಸಾಕಲಿಕ್ಕೆ ಬೆಕ್ಕಿನ ಮರಿ ಬೇಕಾದಲ್ಲಿ ಸಂಪರ್ಕಿಸಿ:**
70194 37278

**ಶ್ರೀ ಸತ್ಯಶನೇಶ್ವರ ಸೆಂಟರ್**
ನಿಮ್ಮ ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸುತ್ತೇವೆ ಹಾಗೂ ತಂತಿ ಬೇಲಿಗಳನ್ನು ಹಾಕಿಕೊಡುತ್ತೇವೆ, ಕಾಂಪೌಂಡ್‌ಗಳನ್ನು ಕಟ್ಟಿಕೊಡಲಾಗುತ್ತದೆ. ಸಂಪರ್ಕಿಸಿ:
73535 07622

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಕೆಲಸಕ್ಕೆ ಅನುಭವವುಳ್ಳ ಹಾಗೂ ದ್ವಿ ಚಕ್ರ ವಾಹನ ಹೊಂದಿರುವ SSLC ಪಾಸ್ ಆಗಿರುವ ಅಭ್ಯರ್ಥಿಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಹಾಗೂ ಇನ್ಸೆಂಟಿವ್ ಪಡೆಯಬಹುದು
88617 34147, 78920 09387

ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

HOUSING LOAN
CONSTRUCTION LOAN
SITE PURCHASE & CONSTRUCTION
VEHICLE LOAN
(Only for 4 Wheelers)
*Conditions Apply
JM Financial Home Loans Limited
Nirvana Vali Traders, Office No. 310, 3rd Floor, Vidyanagar, Near MVP Road, Hubli, Dharwad-580 030 India
9606814606

# ರಾಜ್ಯಕ್ಕೆ ಮೊದಲ ಹಂತದಲ್ಲಿ 10 ಲಕ್ಷ ಡೋಸ್ ಕೊರೊನಾ ಲಸಿಕೆ ಲಭ್ಯ

ಬೆಂಗಳೂರು, ಡಿ.17 - ಕೊರೊನಾ ಸೋಂಕು ತಡೆ ಕಾರ್ಯಕ್ರಮದ ಅಂಗವಾಗಿ ಕರ್ನಾಟಕಕ್ಕೆ ಮೊದಲ ಹಂತದಲ್ಲಿ 10 ಲಕ್ಷ ಡೋಸ್ ಲಸಿಕೆ ಸದ್ಯದಲ್ಲೇ ಲಭ್ಯವಾಗಲಿದೆ.


ಕೇಂದ್ರ ಸರ್ಕಾರದಿಂದ ದೊರೆಯುವ ಲಸಿಕೆಯನ್ನು ಸಂಗ್ರಹಿಸಿ ರಾಜ್ಯಾದ್ಯಂತ ವಿಸ್ತರಿಸಲು ಬೆಂಗಳೂರು ನಗರ ಮತ್ತು ಕಲಬುರಗಿಯನ್ನು ರಾಜ್ಯದ ದಾಸ್ತಾನು ಕೇಂದ್ರಗಳಾಗಿ ಗುರುತಿಸಲಾಗಿದೆ.

ಈ ಎರಡು ಕೇಂದ್ರಗಳ ಜೊತೆಗೆ ಶಿವಮೊಗ್ಗ, ಬಳ್ಳಾರಿ ಮತ್ತು ಬೆಂಗಳೂರು ಗ್ರಾಮಾಂತರ ನಗರಗಳನ್ನು ಪ್ರಾದೇಶಿಕ ಕೇಂದ್ರಗಳಾಗಿ ಗುರುತಿಸಲಾಗಿದೆ.

ಇಡೀ ರಾಜ್ಯಕ್ಕೆ ಈ ಘಟಕಗಳಿಂದಲೇ ಲಸಿಕೆ ರವಾನೆ ಆಗಲಿದೆ, ಇದಕ್ಕಾಗಿ ಕೇಂದ್ರ ಸರ್ಕಾರ 10 ವಾಕಿಂಗ್ ಕೂಲರ್ ಮತ್ತು 10 ವಾಕಿಂಗ್ ಫ್ರೀಜರ್‌ಗಳನ್ನು ನೀಡಿದೆ. ರಾಜ್ಯ ಸರ್ಕಾರದ ಬಳಿ ಪ್ರಸ್ತುತ ಮೂರು ವಾಕಿಂಗ್ ಕೂಲರ್ ಮತ್ತು 2 ವಾಕಿಂಗ್ ಫ್ರೀಜರ್‌ಗಳಿವೆ. ರಾಜ್ಯಕ್ಕೆ 866 ಸ್ಮಾಲ್ ಐಸ್ ಲೈನ್ಡ್, 64 ದೊಡ್ಡ ಐಸ್ ಲೈನ್ಡ್ ರೆಫ್ರಿಜಿರೇಟರ್‌ಗಳನ್ನು ಕೇಂದ್ರ ನೀಡಲಿದೆ.

ಇದು ಸಾಲದಾಗಿದ್ದು, ಮತ್ತೆ ಮೂರು ವಾಕಿಂಗ್ ಕೂಲರ್ ಮತ್ತು ಮೂರು ವಾಕಿಂಗ್ ಫ್ರೀಜರ್‌ಗಳನ್ನು ನೀಡುವಂತೆ ಕೇಂದ್ರ ಆರೋಗ್ಯ ಇಲಾಖೆಯನ್ನು ರಾಜ್ಯ ಸರ್ಕಾರ ಕೋರಿದೆ. ಕರ್ನಾಟಕಕ್ಕೆ ಎರಡು ಕಂಪನಿಗಳ ಲಸಿಕೆ ಬರುವ ನಿರೀಕ್ಷೆ ಇದ್ದು, ಅದು ಯಾವುವು ಎಂಬ ಬಗ್ಗೆ ಗುಟ್ಟು ಬಿಟ್ಟುಕೊಟ್ಟಿಲ್ಲ.

ಲಸಿಕೆ ಬಂದ ತಕ್ಷಣವೇ ಮೊದಲು ಆರೋಗ್ಯ ಸೇವಾ ಸಿಬ್ಬಂದಿಗೆ ಮೊದಲ ಆದ್ಯತೆಯಲ್ಲಿ ಲಸಿಕೆ ನೀಡಲಿದ್ದು, ಈಗಾಗಲೇ 4.17 ಲಕ್ಷ ಆರೋಗ್ಯ ಸಿಬ್ಬಂದಿಯನ್ನು ನೋಂದಾಯಿಸಲಾಗಿದೆ.



ಮಾಸಾಂತ್ಯದ ವೇಳೆಗೆ ಈ ಸಂಖ್ಯೆ ಮತ್ತಷ್ಟು ಹೆಚ್ಚಲಿದೆ, ಇದನ್ನು ಆಧರಿಸಿಯೇ ರಾಜ್ಯಕ್ಕೆ ಲಸಿಕೆಗಳ ಪ್ರಮಾಣ ಹೆಚ್ಚಿಸಲಾಗಿದೆ ಎಂದು ತಿಳಿದುಬಂದಿದೆ.

ಮೊದಲ ಹಂತದಲ್ಲಿ ನಾಲ್ಕೂವರೆಯಿಂದ 5 ಲಕ್ಷ ಮಂದಿ ನೋಂದಾಯಿತರಿಗೆ ಲಸಿಕೆ ಅಗತ್ಯವಿದೆ, ಮೊದಲ ಲಸಿಕೆ ಪಡೆದ 27 ದಿನಗಳ ನಂತರ 28ನೇ ದಿನದಂದು ಎರಡನೇ ಲಸಿಕೆ ನೀಡಲಾಗುತ್ತದೆ.

ಈ ಅಂಕಿ-ಅಂಶಗಳನ್ನು ಆಧಾರವಾಗಿಟ್ಟುಕೊಂಡು ಕೇಂದ್ರ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ಬಿಡುಗಡೆ ಮಾಡುತ್ತಿದೆ. ಲಸಿಕಾ ಕೇಂದ್ರಗಳಿಂದ ಸಂಚಾರಿ ಶೈತ್ಯಾಗಾರದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಿಗೆ ರವಾನೆ ಆಗಲಿದ್ದು, ಆ ನಂತರ ತರಬೇತಿ ಹೊಂದಿದ ಸಿಬ್ಬಂದಿ ಲಸಿಕೆಗಳನ್ನು ನೋಂದಾಯಿತ ಆರೋಗ್ಯ ಸೇವಕರಿಗೆ ನೀಡಲಿದೆ.

ಇವರ ನಂತರ ಕೊರೊನಾ ವಾರಿಯರ್‌ಗಳಿಗೆ, ನಂತರ 60 ವರ್ಷಕ್ಕಿಂತ ಮೇಲ್ಪಟ್ಟವರು ಮತ್ತು ಮಾರಣಾಂತಿಕ ರೋಗದಿಂದ ಬಳಲುತ್ತಿರುವವರಿಗೆ ಎರಡನೇ ಹಂತದಲ್ಲಿ ದೊರೆಯಲಿದೆ.

ಚುನಾವಣಾ ಬೂತ್ ಮಾದರಿಯಲ್ಲಿ ರಾಜ್ಯಾದ್ಯಂತ ಕೇಂದ್ರಗಳನ್ನು ಆರಂಭಿಸಿ ಅಲ್ಲಿಂದಲೇ ಪರಿಣಿತರು ಲಸಿಕೆ ಹಾಕಲಿದ್ದಾರೆ.

ಪ್ರತಿ ಜಿಲ್ಲೆಯ ಎರಡು ತಾಲ್ಲೂಕುಗಳನ್ನು ಆಯ್ಕೆ ಮಾಡಿ ಲಸಿಕೆಯನ್ನು ನೀಡಲು ಕೇಂದ್ರ ಆರೋಗ್ಯ ಇಲಾಖೆ ಕೆಲವು ಸೂಚನೆಗಳನ್ನು ನೀಡಿದೆ.

ಲಸಿಕೆ ಎಂದು ಬರುತ್ತದೆ, ಯಾವಾಗ ನೀಡಬೇಕು ಎಂಬ ಬಗ್ಗೆ ಗುಟ್ಟು ಬಿಟ್ಟು ಕೊಡದ ಕೇಂದ್ರ, ದಿನನಿತ್ಯ ರಾಜ್ಯ ಸರ್ಕಾರಗಳಿಗೆ ಮಾರ್ಗಸೂಚಿಗಳನ್ನು ರವಾನಿಸುತ್ತಿದೆ.

ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಜಿಲ್ಲೆಗಳಿಗೆ ಬೆಂಗಳೂರಿನ ದಾಸ್ತಾನು ಕೇಂದ್ರದಿಂದ ಲಸಿಕೆ ರವಾನೆಯಾಗಲಿದೆ.

ದಾವಣಗೆರೆ, ಚಿತ್ರದುರ್ಗ, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಗದಗ, ಹಾವೇರಿಗೆ ಶಿವಮೊಗ್ಗದ ಪ್ರಾದೇಶಿಕ ಕೇಂದ್ರದಿಂದ ರವಾನೆಯಾಗಲಿದೆ.

ಕೊಪ್ಪಳ, ರಾಯಚೂರು, ವಿಜಯನಗರ, ಬಾಗಲಕೋಟೆಗೆ ಬಳ್ಳಾರಿ ಪ್ರಾದೇಶಿಕ ಕೇಂದ್ರದಿಂದ, ಬೀದರ್, ವಿಜಯಪುರ, ಧಾರವಾಡಕ್ಕೆ ಕಲಬುರಗಿ ಪ್ರಾದೇಶಿಕ ಕೇಂದ್ರಗಳಿಂದ ಲಸಿಕೆ ರವಾನಿಸಲು ಸರ್ಕಾರ ಸಿದ್ಧತೆ ಮಾಡಿಕೊಂಡಿದೆ.

## ಹರಿಹರ : ಚುನಾವಣೆ ಪೂರ್ವ ಸಿದ್ಧತೆ ಪರಿಶೀಲನೆ



ಹರಿಹರ, ಡಿ.17 - ಇದೇ ದಿನಾಂಕ 27 ರಂದು ನಡೆಯವ ಗ್ರಾಮ ಪಂಚಾಯತಿ ಚುನಾವಣೆಯ ನಿಮಿತ್ತವಾಗಿ ನಗರಕ್ಕೆ ಚುನಾವಣಾ ವೀಕ್ಷಕರಾದ ಆರತಿ ಆನಂದ್ ರವರು ತಹಶೀಲ್ದಾರ್ ಕಚೇರಿಗೆ ಭೇಟಿ ನೀಡಿ ಚುನಾವಣೆಯ ಪೂರ್ವ ಸಿದ್ಧತೆ ಬಗ್ಗೆ ಪರಿಶೀಲನೆ ನಡೆಸಿ ಮಾಹಿತಿಯನ್ನು ಸಂಗ್ರಹಿಸಿದರು.

ಈ ವೇಳೆ ಮಾತನಾಡಿದ ಅವರು ಹರಿಹರ ತಾಲ್ಲೂಕಿನ 23 ಗ್ರಾಮ ಪಂಚಾಯತಿಗಳ ಚುನಾವಣೆಯಲ್ಲಿ ಯಾವುದೇ ತರಹದ ಲೋಪದೋಷಗಳು ಆಗದಂತೆ ಈಗಾಗಲೇ ಎಲ್ಲಾ ರೀತಿಯ ಸಿದ್ದತೆ ಮಾಡಲಾಗಿದೆ. ಅದರಲ್ಲಿ ಮತದಾರರ ಪಟ್ಟಿಗಳ ವಿತರಣೆ, ಮತದಾನ ಕೇಂದ್ರಗಳಲ್ಲಿ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ಸೂಕ್ತವಾದ ವ್ಯವಸ್ಥೆ, ಸಾರ್ವಜನಿಕರಿಗೆ ಬೇಕಾಗುವ ಸಹಾಯವಾಣಿ ಕೇಂದ್ರ, ಅತಿ ಸೂಕ್ಷ್ಮ ಮತಗಟ್ಟೆ ಕೇಂದ್ರಗಳಲ್ಲಿ ಹೆಚ್ಚಿನ ನಿಗಾವಹಿಸುವುದು ಮತ್ತು ಮತದಾನ ಕೇಂದ್ರಕ್ಕೆ ಆಗಮಿಸುವ ಮತದಾರರಿಗೆ ಜಾಗೃತಿ ಮೂಡಿಸುವ ಕಾರ್ಯ ಸೇರಿದಂತೆ ಹಲವಾರು ಪ್ರಮುಖ ಕೆಲಸಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಪರಿಶೀಲನೆ ಮಾಡಲಾಗಿದೆ ಎಂದು ಹೇಳಿದರು.

ಚುನಾವಣೆಯಲ್ಲಿ ಆರ್.ಓ ಮತ್ತು ಎ ಆರ್ ಓ.ಬಿಎಲ್ ಓ ಅವರು ತಮಗೆ ವಹಿಸಿರುವ ಕರ್ತವ್ಯದ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ನಿಭಾಯಿಸಲು ವ್ಯವಸ್ಥೆ ಮಾಡಲಾಗುತ್ತದೆ. ಮತದಾರರಿಗೆ ಬ್ಯಾಲೆಟ್ ನಮೂನೆಗಳು ಸಹ ಶೀಘ್ರವಾಗಿ ತಯಾರಿಸಲು ವ್ಯವಸ್ಥೆ ಮಾಡಲಾಗಿದೆ. ಒಟ್ಟಾರೆಯಾಗಿ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಲೋಪದೋಷಗಳು ಆಗದಂತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಮಾಹಿತಿ ಒದಗಿಸಿದರು.

ನಂತರದಲ್ಲಿ ನಗರದ ಸೇಂಟ್ ಮೇರಿಸ್ ಶಾಲೆಗೆ ತೆರಳಿ ಚುನಾವಣೆಯ ಮತ ಎಣಿಕೆ ಕೇಂದ್ರವನ್ನೂ ಸಹ ವೀಕ್ಷಿಸಿದರು.

ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮಾತನಾಡಿ, ಈಗಾಗಲೇ 23 ಗ್ರಾಮ ಪಂಚಾಯತಿಗಳ ಚುನಾವಣೆಯಲ್ಲಿ ಒಟ್ಟು 1199 ನಾಮ ಪತ್ರಗಳು ಸಲ್ಲಿಕೆ ಆಗಿವೆ ನಾಮ ಪತ್ರಗಳನ್ನು ಪರಿಶೀಲನೆ ನಡೆಸಿ ನಂತರದಲ್ಲಿ ಕಣದಲ್ಲಿ ಎಷ್ಟು ಅಭ್ಯರ್ಥಿಗಳು ಉಳಿದಿದ್ದಾರೆ ಎಂಬುದರ ಬಗ್ಗೆ ಮಾಹಿತಿ ನೀಡಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಧಿಕಾರಿ ಹಂಸವೇಣಿ, ಚುನಾವಣಾ ನೋಡಲ್ ಅಧಿಕಾರಿ ಲೋಹಿತ್, ಸಿಬ್ಬಂದಿಗಳಾದ ಆರ್. ಐ. ಆನಂದ್, ಉಮೇಶ್, ಸಂತೋಷ್ ಇತರರು ಹಾಜರಿದ್ದರು,

## ಕಾರಾಗೃಹದ ಬಂಧಿಗಳನ್ನು ಭೇಟಿ ಮಾಡಲು ಇ-ಮುಲಾಕಾತ್ ವ್ಯವಸ್ಥೆ

ದಾವಣಗೆರೆ, ಡಿ.17- ಕೋವಿಡ್-19 ಹಿನ್ನೆಲೆಯಲ್ಲಿ ಕಾರಾಗೃಹದಲ್ಲಿನ ಬಂಧಿಗಳನ್ನು ಭೇಟಿ ಮಾಡಲು ತಾತ್ಕಾಲಿಕ ತಡೆ ಮಾಡಲಾಗಿತ್ತು. ಆದರೆ, ಬಂಧಿಗಳ ಆತ್ಮಸ್ಥೈರ್ಯ ಮತ್ತು ಮನೋಬಲ ಹೆಚ್ಚಿಸಲು ಇಲಾಖಾ ವತಿಯಿಂದ ಇ-ಮುಲಾಕಾತ್ ಎಂಬ ವಿನೂತನ ಯೋಜನೆಯನ್ನು ಜಾರಿಗೆ ತರಲಾಗಿದೆ.

ಇ-ಮುಲಾಕಾತ್ ಮೂಲಕ ಬಂಧಿಗಳು ತಮ್ಮ ಕುಟುಂಬದ ಸದಸ್ಯರೊಂದಿಗೆ ವಿಡಿಯೋ ಸಂಭಾಷಣೆ ಮಾಡಬಹುದಾಗಿರುತ್ತದೆ. ಬಂಧಿಗಳ ಕುಟುಂಬ ಸದ ಸ್ಯರು ಕೆಲವು ನಿಯಮಗಳನ್ನು ಅನುಸರಿಸಿ, ಬಂಧಿಗಳೊಂ ದಿಗೆ ವಿಡಿಯೋ ಸಂಭಾಷಣೆ ನಡೆಸಬಹುದಾಗಿರುತ್ತದೆ.

ವಿಡಿಯೋ ಸಂದರ್ಶನಕ್ಕಾಗಿ ಆನ್‌ಲೈನ್ ನೋಂದಣಿ ಮಾಡಿಸಲು ಸಂದರ್ಶಕರು ಗೂಗಲ್‌ನಲ್ಲಿ NPIP ಎಂಬುದಾಗಿ ಟೈಪ್ ಮಾಡಿದಾಗ ಕಂಡು ಬರುವ ವಿಷಯಾಂಶದಲ್ಲಿ New visit registration-National prison portal ಎಂಬುದರ ಮೇಲೆ ಕ್ಲಿಕ್ ಮಾಡಬೇಕು. ಬಂಧಿಯ ಸಂದರ್ಶನಕ್ಕಾಗಿ ಕಂಡು ಬರುವ ಆನ್‌ಲೈನ್ ಫಾರಂನಲ್ಲಿ ಕೋರಲಾದ ಮಾಹಿತಿಯನ್ನು ಭರ್ತಿ ಮಾಡಬೇಕು. ಮಾಹಿತಿಯನ್ನು ಭರ್ತಿ ಮಾಡಿ ವಿಸಿಟ್ ಮೋಡ್‌ನಲ್ಲಿ ಕಂಡು ಬರುವ 2 ಆಯ್ಕೆಗಳಲ್ಲಿ ವಿಡಿಯೋ ಕಾನ್ಫರೆನ್ಸ್ ಅಂಶವನ್ನು ಆಯ್ಕೆ ಮಾಡಿಕೊಳ್ಳಬೇಕು. ಅಂತಿಮವಾಗಿ ಫಾರಂನ್ನು ಭರ್ತಿ ಮಾಡಿದ ಮೇಲೆ ಕಂಡುಬರುವ ಕ್ಯಾಪ್ಚರ್ ಕೋಡನ್ನು ನಮೂದಿಸಿ, ಸಬ್‌ಮಿಟ್ ಮಾಡುವ ಮೂಲಕ ವಿಡಿಯೋ ಸಂದರ್ಶನಕ್ಕಾಗಿ ನೋಂದಣಿ ಮಾಡುವ ಪ್ರಕ್ರಿಯೆ ಸಂಪೂರ್ಣವಾಗುತ್ತದೆ.


ನೋಂದಣಿ ಮಾಡಿದ ನಂತರ ಸಂದರ್ಶಕರ ಮೊಬೈಲಿಗೆ ವಿಸಿಟ್ ರಿಜಿಸ್ಟ್ರೇಷನ್ ಸಂಖ್ಯೆ ಇ-ಮೇಲ್‌ನಲ್ಲಿ ರೂಂ ವಿಸಿಟ್ ಸಂಖ್ಯೆ ಹಾಗೂ ಭೇಟಿ ಸಮಯ ಪ್ರದರ್ಶಿತವಾಗುತ್ತದೆ. ಸಂದರ್ಶಕರು ತಮ್ಮ ಮೊಬೈಲಿನಲ್ಲಿ 'jitsi meet' ಎಂಬ mobile application ನ್ನು ಇನ್‌ಸ್ಟಾಲ್ ಮಾಡಿಕೊಳ್ಳತಕ್ಕದ್ದು. ಈ ಆ್ಯಪ್ ಮೂಲಕ ವಿಡಿಯೋ ಸಂದರ್ಶನದಲ್ಲಿ ಭಾಗಿಯಾಗಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಅಧೀಕ್ಷಕರ ಕಚೇರಿ, ಜಿಲ್ಲಾ ಕಾರಾಗೃಹ, ದಾವಣಗೆರೆ, ದೂರವಾಣಿ ಸಂಖ್ಯೆ: 08192-254446 ನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಕಾರಾಗೃಹ ಅಧೀಕ್ಷಕ ಕರ್ಣ ಬಿ.ಕ್ಷತ್ರಿ ತಿಳಿಸಿದ್ದಾರೆ.

### ಮಹಾಮನೆ

ಭೂಲೋಕದಲ್ಲೊಂದು ಅರಮನೆ
ಅರಮನೆಯೋ, ಸಿರಿಮನೆಯೋ
ಕುಬೇರನ ಸಿರಿಯ ಖಜಾನೆಯೋ!
ಕಣ್ಮನ ಸೆಳೆಯುವ ಸೌಂದರ್ಯ...
ಕಿಚ್ಚನು ಹಚ್ಚುವ ವೈಭವದಲ್ಲಿ.
ಹೆಬ್ಬಾಗಿಲಿನ ಕಲಾ ನೈಪುಣ್ಯ....
ಕಾಂಚಾಣದ ಹರಿವು ನಗಣ್ಯ !!
ವಿಶಾಲವಾದ ಸಿರಿ ಪ್ರಾಂಗಣವೋ
ಫಳ ಫಳ ಹೊಳೆಯುವ ಕನ್ನಡಿಯೋ!
ತೂಗು ದೀಪಗಳು ನಾವೀನ್ಯತೆಯಲಿ
ಸ್ತಂಭಗಳ ಸಾಲು ಚಿನ್ನದ ಹೊಳಪಲ್ಲಿ
ಗೋಡೆಗಳ ಸೊಬಗು ಚಿತ್ತಾರದಲಿ
ನಯನ ಕೋರೈಸುವ ನವ್ಯತೆಯಲ್ಲಿ!
ರಜತ ಸಿರಿಯ ಹೊನ್ನಿನ ಖನಿಯೋ
ಸೊಬಗನು ಚೆಲ್ಲಿದ ವಜ್ರದ ಮಣಿಯೋ!
ರಾಜ ಮಹಾರಾಜರ ವೈಭವದ ಹಿಂದೆ
ನಿವಾಳಿಸಬೇಕಂತೆ ಇದರ ಮುಂದೆ !!
ಪಂಚ ಭೂತಗಳ ಈ ಕಾಯಕ್ಕೆ......
ಅನೀತಿಯ ಫಲದ ಈ ಕಾಯಕಕ್ಕೆ
ಮೆಚ್ಚನೆಂದೂ ದೇವ ಈ ಲೋಭಕ್ಕೆ !
ಇಹುದಲ್ಲಿ ನಮ್ಮೆಲ್ಲರ ಮಹಾಮನೆ
ಬಂದಿಹೆವು ಮೂರ್ದಿನದ ಬಾಳಿಗೆ.
ಬದುಕಿನ ಚೌಕಟ್ಟಿಗೆ ಆಯಕಟ್ಟು
ಭಾವಬಂಧನದ ಬಾಗಿಲು ತಟ್ಟು
ಉಸುರುಸಿರಿನ ಸೂರಿನ ಮನೆಗೆ...
'ಮಹಾಮನೆಗೆ' ಪಯಣಿಗರು ನಾವು!!

- ವೀಣಾ ಕೃಷ್ಣಮೂರ್ತಿ, ದಾವಣಗೆರೆ.

## ಹರಪನಹಳ್ಳಿ : 608 ಸ್ಥಾನಗಳಿಗೆ 2032 ನಾಮಪತ್ರಗಳು ಸಲ್ಲಿಕೆ




ಹರಪನಹಳ್ಳಿ, ಡಿ.17 - ತಾಲ್ಲೂಕಿನ 35 ಗ್ರಾಮ ಪಂಚಾಯ್ತಿಗಳ 608 ಸ್ಥಾನಗಳಿಗೆ ಮೂರು ಪಟ್ಟು ಅಂದರೆ 2,032 ನಾಮಪತ್ರಗಳನ್ನು ಸಲ್ಲಿಸಲಾಗಿದೆ .

ನಾಮ ಪತ್ರ ಸಲ್ಲಿಸಲು ಅಂತಿಮ ದಿನವಾದ ಡಿ.16 ರಂದೇ 1392 ನಾಮಪತ್ರಗಳು ಸಲ್ಲಿಕೆಯಾಗಿವೆ. ಅಡವಿಹಳ್ಳಿ ಗ್ರಾ.ಪಂ.- 23, ಅಣಜಿಗೇರಿ - 41, ಅರಸಿಕೇರಿ -30, ಉಚ್ಚಂಗಿದುರ್ಗ -69, ಕೆ. ಕಲ್ಲಹಳ್ಳಿ -36, ಕಡತಿ- 53, ಕಡಬಗೇರಿ- 43, ಕುಂಚೂರು- 15, ಕೂಲಹಳ್ಳಿ- 65, ಗುಂಡಗತ್ತಿ- 32, ಚಿಗಟೇರಿ- 10, ಚಟ್ನಿಹಳ್ಳಿ- 40, ಚಿರಸ್ಥಹಳ್ಳಿ- 34, ತೆಲಿಗಿ- 28, ತೊಗರಿಕಟ್ಟೆ - 50, ತೌಡೂರು- 63, ದುಗ್ಗಾವತಿ- 68, ನಂದಿಬೇವೂರು- 26, ನಿಚ್ಚವ್ವನಹಳ್ಳಿ - 57, ನಿಟ್ಟೂರು- 34.

ನೀಲಗುಂದ- 62, ಪುಣಭಗಟ್ಟ- 33, ಬೆಣ್ಣಿಹಳ್ಳಿ- 45, ಬಾಗಳಿ- 43, ಮತ್ತಿಹಳ್ಳಿ- 52, ಮಾಡ್ಲಗೇರಿ- 24, ಮೈದೂರು- 51, ಯಡಿಹಳ್ಳಿ - 26, ರಾಗಿಮಸಲವಾಡ- 45, ಲಕ್ಷ್ಮೀಪುರ- 32, ಶಿಂಗ್ರಿಹಳ್ಳಿ- 21, ಸಾಸ್ವಿಹಳ್ಳಿ - 23, ಹಿರೇಮೇಗಳಗೇರಿ- 40 ಹೀಗೆ ಒಟ್ಟು 2032 ನಾಮಪತ್ರಗಳು ಸಲ್ಲಿಸಲ್ಪಟ್ಟಿವೆ. ನಾಮ ಪತ್ರ ವಾಪಾಸ್ ಪಡೆಯಲು ಡಿ. 19 ರಂದು ಅಂತಿಮ ದಿನವಾಗಿದೆ, ಡಿ. 27 ರಂದು ಚುನಾವಣೆ ನಡೆಯಲಿದೆ.

## ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಿಂದ ತೊಗರಿ ಬೆಳೆ ಕ್ಷೇತ್ರೋತ್ಸವ




ದಾವಣಗೆರೆ, ಡಿ.17- ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ದಾವಣಗೆರೆ ಇವರು ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಅಡಿಯಲ್ಲಿ ತೊಗರಿ ಬೆಳೆಯ ಗುಚ್ಛ ಮುಂಚೂಣಿ ಪ್ರಾತ್ಯಕ್ಷಿಕೆಯ ಅಡಿಯಲ್ಲಿ ಕ್ಷೇತ್ರೋತ್ಸವವನ್ನು ರಾಮೇಶ್ವರ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ್ ಮಾತನಾಡಿ, ಅಧಿಕ ಇಳುವರಿ ಕೊಡುವ ತಳಿಯಾದ ಬಿಆರ್‌ಜಿ 5, ಇದರ ಜೊತೆಗೆ ಸರಿಯಾದ ಸಮಯಕ್ಕೆ ಕೀಟ ಮತ್ತು ರೋಗ ನಿರ್ವಹಣೆ ಹಾಗೂ ಪಲ್ಸ್ ಮ್ಯಾಜಿಕ್ ಬಳಕೆ ಮಾಡಿದ್ದರಿಂದ ಉತ್ತಮವಾದ ಇಳುವರಿಯ ನಿರೀಕ್ಷೆಯಲ್ಲಿದ್ದಾರೆ.

ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರಾದ ರಾಕೇಶ್, ರವಿಕುಮಾರ್, ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

## ಚುನಾವಣೆ ಕರ್ತವ್ಯ ನಿಷ್ಪಕ್ಷಪಾತವಾಗಿರಲಿ



### ಜಗಳೂರಿನಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ

ಜಗಳೂರು, ಡಿ.17 - ಚುನಾವಣೆಯಲ್ಲಿ ಸಿಬ್ಬಂದಿಗಳು ಯಾವುದೇ ಒತ್ತಡಕ್ಕೆ ಒಳಗಾಗದೆ ನಿಷ್ಪಕ್ಷಪಾತದಿಂದ ಕರ್ತವ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸೂಚಿಸಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಗ್ರಾಮ ಪಂಚಾಯತಿ ಚುನಾವಣೆ ಸಿಬ್ಬಂದಿಗಳಿಗೆ ಆಯೋಜಿಸಿದ್ದ ತರಬೇತಿ ಶಿಬಿರಕ್ಕೆ ಭೇಟಿ ನೀಡಿ ವೀಕ್ಷಿಸಿ ನಂತರ ಅವರು ಮಾತನಾಡಿದರು.

ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ತೀವ್ರ ಪೈಪೋಟಿ ನಡೆಯಲಿದ್ದು ಮತದಾನ ಜಿದ್ದಾಜಿದ್ದಿಯಾಗಿ ನಡೆಯುತ್ತದೆ. ಕೇವಲ ಒಂದು ಮತ ಅಂತರದ ಗೆಲುವಿನ ಸಾಧ್ಯತೆಗಳಿರುತ್ತದೆ. ಈ ದೆಸೆಯಿಂದ ತಾವುಗಳು ನಿರ್ಭಯದಿಂದ ಯಾರ ಪರ ವಿರೋಧವಾಗಿರ ಬಾರದು, ನಡಾವಳಿಕೆ ಹಾಗೂ ನೋಡುವ ದೃಷ್ಟಿಕೋನವು ಕೂಡ ಸಹಜವಾಗಿರಬೇಕು.

ಮತಗಟ್ಟೆಯಲ್ಲಿ ಮತದಾನದ ವೇಳೆ ವ್ಯಕ್ತಿಗಳ ಅನಗತ್ಯ ಪ್ರವೇಶಕ್ಕೆ ಕಡಿವಾಣ ಹಾಕಿರಿ. ಅಗತ್ಯವಿದ್ದಲ್ಲಿ ನಿಮ್ಮ ಆದೇಶದ ಮೇರೆಗೆ ಮಾತ್ರ ಒಳಗಡೆ ಬರಬೇಕು ನೀವು ಖಡಕ್ ಆಗಿದ್ದರೆ ನಿಮ್ಮ ಬಗ್ಗೆ ಭಯವಿರುತ್ತದೆ ಎಂದು ಸಿಬ್ಬಂದಿಗೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಡಾ. ನಾಗವೇಣಿ, ತಾ.ಪಂ ಇಒ ಮಲ್ಲಾನಾಯ್ಕ ಸೇರಿದಂತೆ ಮತ್ತಿತರರು ಇದ್ದರು.

## ಮಲ್ಲಿಕಾರ್ಜುನ ಸ್ವಾಮಿಗೆ ಪ್ರಶಸ್ತಿ



ಸಿರಿಗೆರೆ, ಡಿ.17- ಮೈಸೂರಿನ ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ನೀಡುವ 'ಕನ್ನಡ ವಿಕಾಸ ರತ್ನ' ಪ್ರಶಸ್ತಿಗೆ ಪತ್ರಕರ್ತ ಹಾಗೂ ದೇಹದಾನಿ ಸಿರಿಗೆರೆಯ ಎಂ.ಎಸ್.ಮಲ್ಲಿಕಾರ್ಜುನ ಸ್ವಾಮಿ ಅವರಿಗೆ ಕನ್ನಡ ವಿಕಾಸ ರತ್ನ ಪ್ರಶಸ್ತಿ ಲಭಿಸಿದೆ. ನಾಡಿದ್ದು ದಿನಾಂಕ 19 ರಂದು ಮೈಸೂರಿನ ಕಲಾ ಮಂದಿರದಲ್ಲಿ ನಡೆಯಲಿರುವ ಕನ್ನಡ ಹಬ್ಬ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ವೇದಿಕೆಯ ಸಂಸ್ಥಾಪಕ ಅಧ್ಯಕ್ಷರಾದ ಹೆಚ್.ಎಲ್.ಯಮುನಾ ತಿಳಿಸಿದ್ದಾರೆ.

## ನಗರದಲ್ಲಿಂದು ಚಿತ್ರಕಲಾ ಪ್ರದರ್ಶನ

ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಇಂದು ಮತ್ತು ನಾಳೆ ಬೆಳಿಗ್ಗೆ 10.30 ರಿಂದ ಸಂಜೆ 5 ರವರೆಗೆ ಕೆ. ದ್ರಾಕ್ಷಾಯಣಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ನಡೆಯಲಿದೆ. ಇಂದು ಬೆಳಿಗ್ಗೆ 10:30 ಕ್ಕೆ ಕಾರ್ಯಕ್ರಮವನ್ನು ಚೇತನಾ ರವಿ ಉದ್ಘಾಟಿಸಲಿದ್ದು, ಉಪನ್ಯಾಸಕರಾದ ಲತಿಕಾ ಶೆಟ್ಟಿ, ಕಾಲೇಜಿನ ಪ್ರಾಚಾರ್ಯ ಡಾ. ರವೀಂದ್ರ ಎಸ್. ಕಮ್ಮಾರ್ ಮುಖ್ಯಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

## ಹರಿಹರ : ಕಳ್ಳರ ಹಾವಳಿ ಹೆಚ್ಚಳ

ಹರಿಹರ, ಡಿ.17 - ನಗರದಲ್ಲಿ ಇತ್ತೀಚೆಗೆ ಕಳ್ಳರ ಹಾವಳಿ ಹೆಚ್ಚಾಗಿದ್ದು, ಪ್ರತಿದಿನ ವಿವಿಧ ಬಡಾವಣೆಗಳಲ್ಲಿ ಕಳ್ಳತನ ಆಗುತ್ತಿದೆ.

ಕೇಶವ ನಗರದಲ್ಲಿ ಇತ್ತೀಚೆಗೆ ಮನೆಯ ಅಂಗಳದಲ್ಲಿದ್ದ ದ್ವಿಚಕ್ರ ವಾಹನ ಕಳ್ಳತನವಾಗಿದೆ. ಗುತ್ತೂರು ಕಾಲೋನಿಯ ಪಡಿತರ ಅಂಗಡಿಯ ಪಕ್ಕದ ಅಂಗಡಿಯೊಂದರಲ್ಲಿ ಲ್ಯಾಪ್‌ಟ್ಯಾಪ್ ಹಾಗೂ ಮೊಬೈಲ್ ಕಳ್ಳತನವಾಗಿದೆ. ಅಪರಾಧ ವಿಭಾಗದ ಪೊಲೀಸರು ಕೂಡಲೇ ನಿಗಾವಹಿಸಬೇಕಾಗಿದೆ ಎಂಬುದು ನಾಗರಿಕರ ಮನವಿಯಾಗಿದೆ.

## ವಾಲ್ಮೀಕಿ ಜಾತ್ರಾ ಸಮಿತಿ ಆಯ್ಕೆ ಸಭೆ

**ಕೂಡ್ಲಿಗಿ**

ಕೂಡ್ಲಿಗಿ, ಡಿ.17 - ನಗರದ ಶ್ರೀ ವಾಲ್ಮೀಕಿ ಭವನದಲ್ಲಿ 3ನೇ ವರ್ಷದ ವಾಲ್ಮೀಕಿ ಜಾತ್ರೆ ಅಂಗವಾಗಿ ನಡೆದ ಜಾತ್ರಾ ಸಮಿತಿ ಪದಾಧಿಕಾರಿಗಳ ಆಯ್ಕೆ ಸಭೆಯಲ್ಲಿ ಶ್ರೀ ವಾಲ್ಮೀಕಿ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಸಮಾಜದ ಸಾಧಕರಾದ ಪಿ. ಮಹೇಶ್ ಮುಖ್ಯಮಂತ್ರಿ ಪದಕ (ಅರಣ್ಯ ಇಲಾಖೆ) ಪಡೆದಿರುವ ಪಿ. ಮಹೇಶ್, ದೇವದಾಸಿ ಸ್ವಾವಲಂಬನೆ ಕೇಂದ್ರದ ರಾಜ್ಯೋತ್ಸವ ಪ್ರಶಸ್ತಿ ವಿಜೇತೆ ಕನಕೇರಿ ವೆಂಕಮ್ಮ, ಐಐಟಿ ಪರೀಕ್ಷಾ ಉತ್ತೀರ್ಣ ಕಾಲ್ಚಟ್ಟಿ ಗೋವಿಂದ್ ಅವರನ್ನು ಸನ್ಮಾನಿಸಲಾಯಿತು. ಜಾತ್ರೆ ದೇಣಿಗೆ ಸಂಗ್ರಹ, ಧಾನ್ಯ ಸಂಗ್ರಹ ಹಾಗೂ ನಗರದ ಎಲ್ಲಾ ಗುತ್ತಿಗೆದಾರರು ಸೇರಿ ಅಕ್ಕಿ ನೀಡಲು ಒಪ್ಪಿದರು.

ಅ.ಕ.ವಾ.ನಾ. ಮಹಾಸಭಾ ಅಧ್ಯಕ್ಷ ಎಸ್. ಸುರೇಶ್, ಹಿರಿಯ ಮುಖಂಡರಾದ ಕಾವಲಿ ಶಿವಪ್ಪ ನಾಯಕ, ಬಿ. ಭೀಮೇಶ್, ಹೋಟೆಲ್ ಭರಮಪ್ಪ, ಪಿ. ಭೀಮಪ್ಪ, ಗೋಮಾಲಿ ನಾಗಪ್ಪ, ಗುಡೇಕೋಟೆ ನಾಗಪ್ಪ, ವಿರೂಪಾಪುರ ರಾಘವೇಂದ್ರ, ಪ.ಪಂ. ಸದಸ್ಯರುಗಳು, ಮಂಜು ಮಯೂರ ಮತ್ತಿತರರು ಉಪಸ್ಥಿತರಿದ್ದರು.

## ಸಹೋದರಿಯರ ಪೈಕಿ ಅಪ್ರಾಪ್ತೆಯ ಮದುವೆಗೆ ತಡೆ

ದಾವಣಗೆರೆ, ಡಿ.17 - ಅಣ್ಣ-ತಮ್ಮನಿಗೆ ಅದೇ ಗ್ರಾಮದ ಅಕ್ಕ-ತಂಗಿಯರೊಂದಿಗೆ ಮದುವೆ ಮಾಡಲು ಸಿದ್ಧತೆ ನಡೆಸಿದ್ದು, ಸಹೋದರಿಯರ ಪೈಕಿ ಓರ್ವ ಅಪ್ರಾಪ್ತೆಯ ಮದುವೆ ತಡೆಯುವಲ್ಲಿ ಮಕ್ಕಳ ಸಹಾಯವಾಣಿ ಕೊಲ್ಯಾಬ್ ಡಾನ್ ಬಾಸ್ಕೋ, ಪಿಡಿಓ, ಶಿಶು ಅಭಿವೃದ್ಧಿ ಯೋಜನೆಯ ಹಿರಿಯ ಮೇಲ್ವಿಚಾರಕಿ, ಹದಡಿ ಪೊಲೀಸರು ಯಶಸ್ವಿಯಾಗಿರುವ ಘಟನೆ ತಾಲ್ಲೂಕಿನ ಹದಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇಂದು ನಡೆದಿದೆ.

ಗ್ರಾಮವೊಂದರ ಅಣ್ಣ, ತಮ್ಮನಿಗೆ ಅದೇ ಗ್ರಾಮದ ಅಕ್ಕ-ತಂಗಿ ಮದುವೆ ಮಾಡಲು ಸಿದ್ಧತೆ ನಡೆದಿತ್ತು. ಈ ಬಗ್ಗೆ ಖಚಿತ ಮಾಹಿತಿ ಆಧರಿಸಿ ಮಕ್ಕಳ ಸಹಾಯವಾಣಿ ಕೊಲ್ಯಾಬ್ ಡಾನ್ ಬಾಸ್ಕೋ ತಂಡದ ಸಂಯೋಜಕ ಟಿ.ಎಂ. ಕೊಟ್ರೇಶ್, ಮಕ್ಕಳ ಸಹಾಯವಾಣಿ ಕಾರ್ಯಕರ್ತರಾದ ಟಿ.ಎ. ಹರ್ಷದ್ ಅಲಿ, ಗ್ರಾಮ ಪಂಚಾಯಿತಿ ಪಿಡಿಓ ಲಕ್ಷ್ಮೀದೇವಿ, ಶಿಶು ಅಭಿವೃದ್ಧಿ ಯೋಜನೆಯ ಹಿರಿಯ ಮೇಲ್ವಿಚಾರಕರಾದ ಮೈತ್ರಾದೇವಿ, ಮೇಲ್ವಿಚಾರಕರಾದ ಸುಮಂಗಲ, ಹದಡಿ ಠಾಣೆ ಎಎಸ್‌ಐ ಚನ್ನವೀರಪ್ಪ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಹಾಲೇಶ್ ತಂಡವು ಅಪ್ರಾಪ್ತೆಯ ಮನೆಗೆ ತೆರಳಿ ಬಾಲಕಿಯ ತಂದೆ, ತಾಯಿಯನ್ನು ಭೇಟಿ ಮಾಡಿ, ಅಪ್ರಾಪ್ತೆಯ ಶಾಲಾ ದಾಖಲೆಯನ್ನು ಪರಿಶೀಲಿಸಿದಾಗ ಬಾಲಕಿಯ ವಯಸ್ಸು 16 ವರ್ಷ 11 ತಿಂಗಳು ಎಂಬುದಾಗಿ ಕಂಡು ಬಂದಿದೆ.

ಬಾಲ್ಯ ವಿವಾಹ ನಿಷೇಧ ಕಾಯ್ದೆ ಪ್ರಕಾರ ಬಾಲ್ಯ ವಿವಾಹ ಮಾಡಿದರೆ 1 ಲಕ್ಷ ರು. ದಂಡ, 1 ವರ್ಷಕ್ಕೆ ಕಡಿಮೆ ಇಲ್ಲದಂತೆ 2 ವರ್ಷಕ್ಕೆ ವಿಸ್ತರಿಸಬಹುದಾದ ಜೈಲು ಶಿಕ್ಷೆಯಾಗಲಿದೆ ಎಂಬುದಾಗಿ ಪೋಷಕರಿಗೆ ಎಚ್ಚರಿಸಿ ಕಾನೂನಿನ ಬಗ್ಗೆ ಅರಿವು ಮೂಡಿಸಿದರು. ಅಲ್ಲದೇ ಅಪ್ರಾಪ್ತೆಯ ಪಾಲಕರಿಂದ ಮುಚ್ಚಳಿಕೆ ಪತ್ರ ಪಡೆದಿದ್ದಾರೆ.

### ಚಳಿಗಾಲವಿದು

ಮಾಗಿಯ ಚಳಿಯಲಿ ಬಿಸಿಲದು ಹಿತವು
ಇಬ್ಬನಿ ಹನಿಯಲಿ ಬಿಂಬಿತ ಜಗವು,
ನೋಡಲು ದೃಶ್ಯವು ಕಣ್ಣಿಗೆ ಚಂದ
ಬೆಳಗಿನ ಬಿಸಿಲದು ಮಹದಾನಂದ.

ಕಣ್ಣು ಹರಡಿದೆಡೆ ನೀಲಾಕಾಶ
ಪುಟ್ಟ ಮೋಡಗಳ ಶ್ವೇತ ಪ್ರಕಾಶ,
ಚಳಿಗಾಲವಿದು ಬೀಸುವ ಗಾಳಿ
ಮರಗಳ ಎಲೆಗಳ ಉದುರಿಸೊ ಚಾಳಿ.

ಚರ್ಮವು ಬಿರಿದರೆ ಎಣ್ಣೆ ಸವರುವಿಕೆ
ಉಂಟಾಗದಂತೆ ಮೈಕೈ ತುರಿಕೆ,
ಚಳಿಗಾಲದಲ್ಲಿ ಬೇಕು ಎಚ್ಚರಿಕೆ
ಸ್ವಚ್ಛತೆ ಕೂಡಾ ಪರಿಹಾರವದಕೆ

ಕಡಿಮೆಯಾಗಿದೆ ಹಗಲಿನ ಅವಧಿ
ವಿಸ್ತಾರಗೊಂಡಿದೆ ರಾತ್ರಿಯ ಪರಿಧಿ,
ಚಳಿಗಾಲದಲಿ ಇದು ಸಾಮಾನ್ಯ
ಕಂಬಳಿ, ಹೊದಿಕೆ ಈಗ ಬಲು ಮಾನ್ಯ.

- ಹೆಚ್.ಬಿ.ಮಂಜುನಾಥ್
ಹಿರಿಯ ಪತ್ರಕರ್ತ

### ತಾಳ್ಮೆ

ಮರುಭೂಮಿಯಲಿ ಇರುವ ಅನ್ನವ
ಎಸೆದು ಬಂಗಾರವ ಹುಡುಕುವನಲ್ಲ

ಇರುಳಿನಿಂದ ಕಂಗೆಟ್ಟಿದ್ದ ಯುವಕನು
ಇರುಳು ಚೆನ್ನ ಎಂದು ಹಗಲನು ದೂರ
ಇಡಲಾರ

ಜೀವನದಲ್ಲಿ ತಾಳ್ಮೆ ಎಷ್ಟು ಮುಖ್ಯ
ಎಂಬುದನ್ನು ಹೇಳಿಹೆನು

ಯಾವ ಸಮಯದಲಿ ಯಾವುದು
ಬೇಕು ಎಂಬುದನು ತಿಳಿಯೋ
ಮನುಜ ನಾನು.

- ರೋಹಿತ್, ದಾವಣಗೆರೆ.

### ದಿನದ ಚುಟುಕು

ಮೌನ ಮನೆತನ ಉಳ್ಸುತ್ತೆ
ಮಾತು ಕುಟುಂಬ ಅಳ್ಸುತ್ತೆ
ನೀತಿ ಬಾಳನ್ನು ಬೆಳಗುತ್ತೆ
ಸತ್ಯ- ಧರ್ಮ ಕಾಪಾಡುತ್ತೆ .


- ವೀಕೆಎಂ

## ಆರ್‌ಟಿಜಿಎಸ್‌ನಲ್ಲಿ 24 ತಾಸೂ ಹಣ ಪಾವತಿ

ಮುಂಬೈ, ಡಿ.17 - ಹೆಚ್ಚು ಮೌಲ್ಯದ ಹಣ ವರ್ಗಾವಣೆಗೆ ಇರುವ ಆನ್‌ಲೈನ್ ವ್ಯವಸ್ಥೆಯಾದ ಆರ್‌ಟಿಜಿಎಸ್ (ರಿಯಲ್ ಟೈಮ್ ಗ್ರಾಸ್ ಸೆಟ್ಲಮೆಂಟ್ ಸಿಸ್ಟಮ್) ಸೇವೆಯನ್ನು ದಿನದ 24 ಗಂಟೆಯೂ ಬಳಸುವ ಅವಕಾಶ ಭಾನುವಾರ ರಾತ್ರಿಯಿಂದ ಲಭ್ಯವಾಗಿದೆ. ಇದರೊಂದಿಗೆ ಈ ವ್ಯವಸ್ಥೆ ಜಾರಿ ಮಾಡಿದ ವಿಶ್ವದ ಕೆಲವೇ ಕೆಲವು ರಾಷ್ಟ್ರಗಳ ಪಟ್ಟಿಯಲ್ಲಿ ಭಾರತವೂ ಸೇರ್ಪಡೆಯಾಗಿದೆ.

ಮೊನ್ನೆ ಭಾನುವಾರ ರಾತ್ರಿ 12.30 ರಿಂದಲೇ ಈ ಸೇವೆ ದೇಶಾದ್ಯಂತ ಎಲ್ಲಾ ಗ್ರಾಹಕರಿಗೆ ಲಭ್ಯವಾಗಿದೆ ಎಂದು ಆರ್‌ಬಿಐ ಗೌರ್ನರ್ ಶಕ್ತಿಕಾಂತ್ ದಾಸ್ ಪ್ರಕಟಿಸಿದ್ದಾರೆ. ಈ ಸೇವೆ ವರ್ಷದ 365 ದಿನವೂ ಲಭ್ಯವಿರಲಿದೆ.

ನೆಫ್ಟ್‌ನಲ್ಲಿ ವಾರದ ಏಳೂ ದಿನ ಸೇವೆಗೆ ಅವಕಾಶ ಕಲ್ಪಿಸಿದ ವರ್ಷದೊಳಗೆ ಆರ್‌ಬಿಐ ಆರ್‌ಟಿಜಿಎಸ್ ವ್ಯವಸ್ಥೆಯಲ್ಲೂ ಇದೇ ರೀತಿಯ ಸೌಲಭ್ಯ ಕಲ್ಪಿಸದೆ. 2004 ರಲ್ಲಿ ಕೇವಲ 4 ಬ್ಯಾಂಕ್‌ಗಳಿಗೆ ಸೀಮಿತವಾಗಿ ಆರಂಭವಾದ ಈ ಸೇವೆಯನ್ನು ಪ್ರಸಕ್ತ ದೇಶದಾದ್ಯಂತ ಇರುವ 237 ಬ್ಯಾಂಕ್‌ಗಳ ಮೂಲಕ ಬಳಸಲಾಗುತ್ತಿದೆ.



ನಿತ್ಯ 6.35 ಲಕ್ಷದಷ್ಟು ವ್ಯವಹಾರ ಆರ್‌ಟಿಜಿಎಸ್ ಮೂಲಕ ನಡೆಯುತ್ತಿದ್ದು, 4.17 ಲಕ್ಷ ಕೋಟಿ ರೂ. ಹಣ ವರ್ಗಾವಣೆಯಾಗುತ್ತಿದೆ.


## ಚೆಕ್ ಸುರಕ್ಷತೆಗಾಗಿ ಜ. 1 ರಿಂದ ಬ್ಯಾಂಕಿನಲ್ಲಿ ಹೊಸ ನಿಯಮಗಳು

### ಹೆಚ್ಚಿನ ಮೊತ್ತಕ್ಕೆ ಮಾಹಿತಿ ಕಡ್ಡಾಯ

ಮುಂಬೈ, ಡಿ.17 - ಚೆಕ್ ಮೂಲಕ ಹಣ ಪಾವತಿಸುವುದಕ್ಕೆ ಸಂಬಂಧಿಸಿದಂತೆ ಆರ್‌ಬಿಐ 2021 ರ ಜನವರಿ 1 ರಿಂದ ಹೊಸ ನಿಯಮ ಜಾರಿಗೆ ತರುತ್ತಿದ್ದು, ಅದರನ್ವಯ 50,000 ರೂ.ಗಿಂತ ಹೆಚ್ಚಿನ ಮೊತ್ತಕ್ಕೆ ಚೆಕ್ ನೀಡುವವರು ತಮ್ಮ ಬ್ಯಾಂಕಿಗೆ ಆ ಬಗ್ಗೆ ಮಾಹಿತಿ ನೀಡುವುದು ಕಡ್ಡಾಯ. ಚೆಕ್‌ಗಳ ಮೂಲಕ ನಡೆಯುವ ವಂಚನೆ ತಪ್ಪಿಸಲು ಕಳೆದ ಆಗಸ್ಟ್‌ನಲ್ಲೇ 'ಪಾಸಿಟಿವ್ ಪೇ ಸಿಸ್ಟಂ' ಎಂಬ ವ್ಯವಸ್ಥೆ ತರುವುದಾಗಿ ಆರ್‌ಬಿಐ ಪ್ರಕಟಿಸಿತ್ತು. ಅಗತ್ಯವಿದ್ದವರು ಈ ಆಯ್ಕೆ ಪಡೆಯಬಹುದು.

**ಹೊಸ ವ್ಯವಸ್ಥೆ ಹೇಗೆ?**

1. ನಾವು ಯಾರಿಗಾದರೂ 50,000 ರೂ.ಗಿಂತ ಹೆಚ್ಚಿನ ಮೊತ್ತಕ್ಕೆ ಚೆಕ್ ನೀಡುವಾಗ ಚೆಕ್‌ನ ಮುಂಭಾಗ ಹಾಗೂ ಹಿಂಭಾಗದ ಫೋಟೋ ತೆಗೆದುಕೊಳ್ಳಬೇಕು.



2. ಚೆಕ್ ನಂಬರ್, ಚೆಕ್‌ನ ದಿನಾಂಕ, ಚೆಕ್ ಪಡೆದವರ ಹೆಸರು, ಅವರ ಬ್ಯಾಂಕ್ ಖಾತೆ ಸಂಖ್ಯೆ ಹಾಗೂ ಚೆಕ್‌ನ ಮೊತ್ತ ಮುಂತಾದ ವಿವರಗಳನ್ನು ಫೋಟೋ ಜೊತೆಗೆ ನಮ್ಮ ಬ್ಯಾಂಕಿಗೆ ನೀಡಬೇಕು.

3. ಎಸ್‌ಎಂಎಸ್, ಇಂಟರ್ನೆಟ್, ಮೊಬೈಲ್ ಅಥವಾ ಎಟಿಎಂ ಹೀಗೆ ಯಾವುದಾದರೊಂದು ಮಾರ್ಗದಲ್ಲಿ ಬ್ಯಾಂಕಿಗೆ ಈ ವಿವರಗಳನ್ನು ನೀಡುವ ವ್ಯವಸ್ಥೆ ಜಾರಿಗೆ ಬರಲಿದೆ.

4. ಚೆಕ್ ಪಡೆದವರು ಆ ಚೆಕ್ ಅನ್ನು ಅವರ ಬ್ಯಾಂಕಿಗೆ ಸಲ್ಲಿಸಿ, ಅದು ನಮ್ಮ ಬ್ಯಾಂಕಿಗೆ ಕಲೆಕ್ಷನ್‌ಗೆ ಬಂದಾಗ, ನಾವು ಬ್ಯಾಂಕಿಗೆ ನೀಡಿದ ವಿವರವನ್ನು ನಮ್ಮ ಬ್ಯಾಂಕ್ ಆ ಚೆಕ್‌ನ ಜೊತೆಗೆ ತಾಳೆ ಹಾಕಿ ನೋಡುತ್ತದೆ.

5. ಮಾಹಿತಿ ತಾಳೆಯಾದರೆ ಮಾತ್ರ ಚೆಕ್ ನಗದಾಗುತ್ತದೆ. ನಾವು ಚೆಕ್‌ನ ಮಾಹಿತಿಯನ್ನು ನಮ್ಮ ಬ್ಯಾಂಕಿಗೆ ನೀಡುವುದಕ್ಕೆ ಮರೆತರೂ ನಮ್ಮ ಚೆಕ್ ನಗದಾಗುವುದಿಲ್ಲ.

6. ಪಾಸಿಟಿವ್ ಪೇ ವ್ಯವಸ್ಥೆಯು ಐಚ್ಛಿಕವಾಗಿದ್ದು, ನಾವು ಆಯ್ಕೆ ಮಾಡಿಕೊಂಡರಷ್ಟೇ ನಮ್ಮ ಬ್ಯಾಂಕ್ ಖಾತೆಯ ಮೂಲಕ ಚೆಕ್ ಹೀಗೆ ಪಾಸಾಗುತ್ತದೆ. ಆದರೆ, 5 ಲಕ್ಷ ರೂ.ಗಿಂತ ಹೆಚ್ಚಿನ ಮೊತ್ತದ ಚೆಕ್‌ಗಳಿಗೆ ಈ ವ್ಯವಸ್ಥೆಯನ್ನು ಕಡ್ಡಾಯಗೊಳಿಸುವ ಅಧಿಕಾರ ಬ್ಯಾಂಕುಗಳಿಗಿರುತ್ತದೆ.

# ಉನ್ನತ ಶಿಕ್ಷಣ ಸಹಕಾರಕ್ಕೆ ಬ್ರಿಟನ್ ಜೊತೆ ರಾಜ್ಯ ಸರ್ಕಾರದ ಒಪ್ಪಂದ


ಬೆಂಗಳೂರು, ಡಿ. 17 - ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ದ್ವಿಪಕ್ಷೀಯ ಸಹಕಾರಕ್ಕೆ ಸಂಬಂಧಿಸಿದ ಒಪ್ಪಂದಕ್ಕೆ ರಾಜ್ಯ ಸರ್ಕಾರ ಮತ್ತು ಬ್ರಿಟಿಷ್ ಸರ್ಕಾರದ ನಡುವೆ ಗುರುವಾರ ಸಹಿ ಮಾಡಲಾಯಿತು.

ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ನಾಯಕತ್ವ ಬೆಳವಣಿಗೆಗೆ ಸಂಬಂಧಿಸಿದಂತೆ ಮೊಟ್ಟಮೊದಲ ಬಾರಿಗೆ ಮೂರು ವರ್ಷಗಳ ಅವಧಿಯ ಒಪ್ಪಂದಕ್ಕೆ ಎರಡೂ ಸರ್ಕಾರಗಳು ಸಹಿ ಮಾಡಿವೆ ಎಂದರು. ಸಹಕಾರ, ವಾಣಿಜ್ಯ, ವ್ಯಾಪಾರ, ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ, ರಕ್ಷಣಾ ಮತ್ತು ಸಂಸ್ಕೃತಿ ಮುಂತಾದ ಹಲವು ಕ್ಷೇತ್ರಗಳಿಗೆ ಭಾರತ ಮತ್ತು ಬ್ರಿಟನ್ ನಡುವಿನ ಸಂಬಂಧ ವೃದ್ಧಿಸಿದೆ.

ಕರ್ನಾಟಕ ಸರ್ಕಾರದ ಗ್ಲೋಬಲ್ ಇನ್ನೋವೇಷನ್ ಅಲಿಯನ್ಸ್ ಕಾರ್ಯಕ್ರಮವು ವಿಶ್ವಾದ್ಯಂತ ಎಲ್ಲಾ ರಾಷ್ಟ್ರಗಳೊಂದಿಗೆ ನಾವೀನ್ಯತಾ ಪಾಲುದಾರಿಕೆ ಹೆಚ್ಚಿಸುವ ಮೂಲಕ ರಾಜ್ಯ ಮುಂಚೂಣಿಯಲ್ಲಿರುವ ತಂತ್ರಜ್ಞಾನ ಹಬ್ ಎಂಬ ಜಾಗತಿಕ ಕೀರ್ತಿಗೆ ಪಾತ್ರವಾಗಿಸಿದೆ ಎಂದವರು ಹೇಳಿದ್ದಾರೆ.

ಬ್ರಿಟನ್ ಕರ್ನಾಟಕದ ಬಹುಮುಖ್ಯ ಜಿ.ಐ.ಎ ಪಾಲುದಾರ ರಾಷ್ಟ್ರವಾಗಿದ್ದು, 2017-18 ರಲ್ಲಿ ಶೇ. 38 ರಷ್ಟು ಹೂಡಿಕೆಯನ್ನು ಭಾರತದಲ್ಲಿ ಮಾಡಿದೆ.

ಟೆಕ್ ಹಬ್, ಟೆಕ್ ಕ್ಲಸ್ಟರ್ಸ್ ಸ್ಥಾಪನೆ ಹಾಗೂ ಗೋಗ್ಲೋಬಲ್‌ನಂತಹ ಕಾರ್ಯಕ್ರಮಗಳು ಭಾರತದಿಂದ



ನಾವೀನ್ಯತಾ ಸ್ಟಾರ್ಟ್ ಅಪ್‌ಗಳನ್ನು ಬ್ರಿಟನ್‌ಗೆ ತಲುಪಿಸಲು ಸಾಧ್ಯವಾಗಿರುವುದು ಸ್ವಾಗತಾರ್ಹ ಕ್ರಮ ಎಂದು ಮುಖ್ಯಮಂತ್ರಿ ತಿಳಿಸಿದರು.

ಬ್ರಿಟಿಷ್ ಸರ್ಕಾರದೊಂದಿಗೆ ಹವಾಮಾನ ಸ್ಥಿತಿಸ್ಥಾಪಕ ನಗರಗಳ ಸಮೃದ್ಧ ನಗರಾಭಿವೃದ್ಧಿ ಕಾರ್ಯಕ್ರಮದ ಮೂಲಕ ನಗರಾಭಿವೃದ್ಧಿ ಇಲಾಖೆ ಈಗಾಗಲೇ ಸಹಯೋಗ ಬೆಳೆಸಿದ್ದು, ಬೆಂಗಳೂರಿನಲ್ಲಿ ಬಹುವಿಧದ ಸಾರಿಗೆ ಹಬ್‌ಗಳ ವಿನ್ಯಾಸ ಮತ್ತು ಕಾರ್ಯಾಚರಣೆಗೆ ಪರಿವರ್ತಿತ ಯೋಜನೆ ತರುವಲ್ಲಿ ಸಹಕಾರಿಯಾಗಿದೆ.

ಬ್ರಿಟಿಷ್ ಕೌನ್ಸಿಲ್‌ನ (ಭಾರತ) ನಿರ್ದೇಶಕ ಬಾರ್ಬರಾ ವಿಕ್‌ಹ್ಯಾಮ್ ಮಾತನಾಡಿ, ಒಪ್ಪಂದವು ಭಾರತ ಸರ್ಕಾರ ಮತ್ತು ಬ್ರಿಟನ್ ನಡುವಿನ ಶೈಕ್ಷಣಿಕ ಸಂಬಂಧವನ್ನು ಸುಭದ್ರಗೊಳಿಸುವುದರ ಜೊತೆಗೆ ಭಾರತದ ರಾಷ್ಟ್ರೀಯ ಶಿಕ್ಷಣ ನೀತಿ-2020 ರಲ್ಲಿ ತಿಳಿಸಲಾಗಿರುವ ಜ್ಞಾನ ವರ್ಧನೆಯ ಆಶಯವನ್ನು ಬೆಂಬಲಿಸಲಿದೆ ಎಂದರು.

ಕರ್ನಾಟಕದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಹಾಗೂ ಉದ್ಯೋಗಾವಕಾಶಗಳನ್ನು ಸೃಜಿಸಿ ರಾಜ್ಯ ಸರ್ಕಾರದ ಗುಣಮಟ್ಟವುಳ್ಳ ಉನ್ನತ ಶಿಕ್ಷಣ ವ್ಯವಸ್ಥೆ ಕಲ್ಪಿಸುವ ಗುರಿಯನ್ನು ತಲುಪಲು ನೆರವಾಗಲಿದೆ ಎಂದರು.

# ರಾಣೇಬೆನ್ನೂರಿನಲ್ಲಿ ದ್ರಾವಿಡ ಶೈಲಿ ಗುಡಿ ನಿರ್ಮಾಣ

ರಾಣೇಬೆನ್ನೂರು, ಡಿ.17- ಇಲ್ಲಿನ ಕುರುಬಗೇರಿ ರಸ್ತೆಯಲ್ಲಿನ ಹಳೇ ಬನಶಂಕರಿ ದೇವಸ್ಥಾನವನ್ನು ದ್ರಾವಿಡ ಶೈಲಿಯಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು, ಒಂದೆರಡು ತಿಂಗಳೊಳಗೆ ಉದ್ಘಾಟನೆಗೊಳ್ಳಲಿದೆ.

ಶಿಗ್ಗಾವಿಯ ವಾಸ್ತು ತಜ್ಞ ಕಮ್ಮಾರ ಅವರ ಆಣತಿಯಂತೆ, ಪೂರ್ವಾಭಿಮುಖದ ನಿವೇಶನದ 180 ಅಡಿ ಸುತ್ತಳತೆಯಲ್ಲಿ ಉತ್ತರ-ದಕ್ಷಿಣ 31 ಅಡಿ, ಪೂರ್ವ-ಪಶ್ಚಿಮ 39 ಅಡಿ, ಮುಖ ಮಂಟಪ 14×14 ಅಡಿ ಹಾಗೂ ಗರ್ಭಗುಡಿ ಸೇರಿದಂತೆ, ಎರಡನ್ನೂ ಧ್ವಜಾಯದಲ್ಲಿ ಕಟ್ಟಲಾಗುತ್ತಿದೆ.

ನೆಲದಿಂದ 40 ಅಡಿ ಎತ್ತರದ ಮೂರು ಹಂತದ ಕರ್ಣಗೂಡು ಗೋಪುರವನ್ನು ನಿರ್ಮಿಸಲಾಗುತ್ತಿದೆ. ದೇವಿಗೆ ಶಂಖವಾದ್ಯ ಅವಶ್ಯವಿದ್ದು, ಗೋಪುರದ ಪೂರ್ವ ಈಶಾನ್ಯ ಹಾಗೂ ಉತ್ತರ ಈಶಾನ್ಯ ದಿಕ್ಕುಗಳಲ್ಲಿ ಶಂಖಗಳನ್ನು ಅಳವಡಿಸಲು ಸ್ಥಳಾವಕಾಶ ಮಾಡಲಾಗುತ್ತಿದೆ.

8 ಸಾವಿರ ಅಡಿ ಕಲ್ಲಿನ ಈ ಕಟ್ಟಡಕ್ಕೆ, ಸುಮಾರು 50 ಲಕ್ಷ ವೆಚ್ಚದ 20 ಲಾರಿ ಲೋಡ್‌ನಷ್ಟು ದೊಡ್ಡಬಳ್ಳಾಪುರದ ದೇವನಹಳ್ಳಿ ವಿಮಾನ ನಿಲ್ದಾಣದ ಬಳಿ ದೊರಕುವ ಗಟ್ಟಿಕಲ್ಲುಗಳನ್ನು ತರಿಸಲಾಗಿದೆ. ಮುರುಡೇಶ್ವರದ ದೇವಸ್ಥಾನ ನಿರ್ಮಾಣದಲ್ಲಿ ಭಾಗಿಗಳಾಗಿದ್ದ ಶಿಲ್ಪಿ ಗೋವಿಂದ ನಾಗಪ್ಪನಾಯ್ಕ ಅವರು ತಮ್ಮ ಸಹಚರರೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ.

ತಾಲ್ಲೂಕಿನ ಚಿಕ್ಕಕುರುವತ್ತಿಯ ಭಕ್ತರು 2 ಲಕ್ಷ ಹಾಗೂ ಧರ್ಮಸ್ಥಳದ ಧರ್ಮಾಧಿಕಾರಿಗಳ ಸಹಾಯ ಧನ 2 ಲಕ್ಷ 50 ಸಾವಿರ ಸೇರಿದಂತೆ, ದೇವಸ್ಥಾನದ ನಿರ್ಮಾಣಕ್ಕೆ ಬೇಕಾಗಬಹುದಾದ ಒಟ್ಟು ಎರಡು ಕೋಟಿಯಷ್ಟು ಹಣವನ್ನು ನಗರದ ಭಕ್ತರೇ ಸ್ವಯಂಪ್ರೇರಿತರಾಗಿ ತಂದುಕೊಟ್ಟಿದ್ದಾರೆ. ಬಾದಾಮಿಯ ದೇವಸ್ಥಾನದಲ್ಲಿರುವಂತೆಯೇ ಸಿಂಹಾರೂಢಳಾದ ದೇವಿ ಮೂರ್ತಿಯನ್ನು ಚೆನ್ನೈ ಬಳಿಯ ಮಹಾಬಲಿಪುರಂನಲ್ಲಿ ತಯಾರಿಸಲಾಗುತ್ತಿದೆ. 4 ಅಡಿ 11 ಇಂಚು ಎತ್ತರದ ಮೂರ್ತಿಗೆ ಕೃಷ್ಣ ಶಿಲೆ ಬಳಸಲಾಗಿದೆ.

ಹೊಸಗುಡಿ ಕಟ್ಟಲು ತಯಾರಿ ನಡೆಸಿದಾಗ ಕಮಿಟಿಯವರ ಬಳಿ ಇದ್ದದ್ದು ಕೇವಲ 6 ಲಕ್ಷ ಹಣ. ಅದಕ್ಕೆ ಮತ್ತಷ್ಟು ಸೇರಿಸಿ ಪಕ್ಕದಲ್ಲಿದ್ದ ಜಾಗವನ್ನು ಖರೀದಿಸಲಾಯಿತು. ನಾವು ಯಾರ ಬಳಿಯೂ ವಂತಿಗೆ ಕೇಳಲು ಹೋಗಲಿಲ್ಲ. ಭಕ್ತರೇ ನಮ್ಮನ್ನು ಕರೆದು ಹಣ ನೀಡಿದ್ದಾರೆ. ಕೊರೊನಾ ಸೋಂಕಿನ ಭಯದಿಂದ ಮೂರು ತಿಂಗಳು ಕೆಲಸಕ್ಕೆ ತಡೆ ಉಂಟಾಯಿತು. ಆದರೆ ಹಣದ ಕೊರತೆ ಎಂದೂ ಕೆಲಸಕ್ಕೆ ಕಾಡಲಿಲ್ಲ ಎಂದು ಸಮಿತಿಯ ಅಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ ಅವರು ದೇವಿಯ ಮಹಿಮೆಯನ್ನು ಕೊಂಡಾಡಿದ್ದಾರೆ.



### ಸರ್ಕಾರದ ನಿರ್ಲಕ್ಷ

**ಬನಶಂಕರಿ ದೇವಿ ಗುಡಿ ನಿರ್ಮಾಣಕ್ಕಾಗಿ ಸರ್ಕಾರದ ಸಹಾಯಧನ ಪಡೆಯಲು ಕಮಿಟಿಯವರು ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ಬೊಮ್ಮಾಯಿ ಅವರ ಗಮನ ಸೆಳೆದು ಎಷ್ಟೇ ಪ್ರಯತ್ನ ನಡೆಸಿದರೂ ಸಚಿವರಿಂದಾಗಲೀ, ಸರ್ಕಾರದಿಂದಾಗಲೀ ಯಾವುದೇ ಸ್ಪಂದನೆ ಸಿಗದಿರುವುದಕ್ಕೆ ಸಮಿತಿಯ ಅಧ್ಯಕ್ಷ ಮಂಜುನಾಥ ಅವರು ತೀವ್ರ ಬೇಸರ ವ್ಯಕ್ತಪಡಿಸಿದರು.**

### ಮೂರ್ತಿಗೆ ಚೀಟಿ....

**ದೇವಿ ಮೂರ್ತಿ ಮಾಡಿಸಿಕೊಡಲು 5 ಜನ ದೇವಿ ಭಕ್ತರು ತಮ್ಮ ಒತ್ತಡದ ಅಪೇಕ್ಷೆಯನ್ನು ವ್ಯಕ್ತ ಪಡಿಸಿದ್ದರು. ಯಾರೊಬ್ಬರಿಗೂ ನೋವುಂಟು ಮಾಡಬಾರದು ಎಂದು ದೇವಿ ಹಾಗೂ ಭಕ್ತರ ಸಮಕ್ಷಮದಲ್ಲಿ ಅಪೇಕ್ಷಿತರ ಹೆಸರುಗಳನ್ನು ಚೀಟಿಯಲ್ಲಿ ಬರೆದು ಹಾಕಿ, ಅದರಲ್ಲಿ ಒಂದನ್ನ ತೆಗೆದು ಅವರಿಗೆ ಒಪ್ಪಿಗೆ ಕೊಡಲಾಯಿತು. ಬೆಳ್ಳಿಯ ಉತ್ಸವ ಮೂರ್ತಿ ತಯಾರಿಸಲು ಸಹ ಇದೆ ಮಾರ್ಗವನ್ನು ಅನುಸರಿಸಲಾಗಿದೆ.**

## ಚುನಾವಣಾ ಕಾರ್ಯ ಯಶಸ್ವಿಗೆ ಸಲಹೆ



**ಹರಪನಹಳ್ಳಿ**

ಹರಪನಹಳ್ಳಿ, ಡಿ.17 - ಇಲ್ಲಿನ ತಾಲ್ಲೂಕು ಕಚೇರಿಯ ಮಹಾತ್ಮಾ ಗಾಂಧೀಜಿ ಸಭಾಂಗಣದಲ್ಲಿ ನಡೆಸಿದ ಅಧಿಕಾರಿಗಳ ಸಭೆಯಲ್ಲಿ ಚುನಾವಣಾ ಕಾರ್ಯ ಬರೀ ಕಂದಾಯ ಇಲಾಖೆಗೆ ಸೀಮಿತವಲ್ಲ. ತಾಲ್ಲೂಕಿನ ಎಲ್ಲಾ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರು ಪರಸ್ಪರ ಕೈಜೋಡಿಸಿ, ಸಹಕಾರ ನೀಡಿ ಯಶಸ್ವಿಗೊಳಿಸಬೇಕು. ತಮಗೆ ನಿರ್ದೇಶನ ನೀಡಿದ ಕಾರ್ಯವನ್ನು ನಿಗದಿತ ಸಮಯದಲ್ಲಿ ಮಾಡಿ ಮುಗಿಸಬೇಕು. ಇದರಲ್ಲಿ ಯಾವುದೇ ನಿರ್ಲಕ್ಷ್ಯತನ ಹಾಗೂ ವಿಳಂಬಕ್ಕೆ ಅವಕಾಶ ಇರುವುದಿಲ್ಲವೆಂದು ಸಹಾಯಕ ಆಯುಕ್ತ ಪ್ರಸನ್ನಕುಮಾರ್ ಅವರು ಸಲಹೆ ನೀಡಿದರು.

ಸಭೆಯಲ್ಲಿ ತಹಶೀಲ್ದಾರ್ ಜಿ.ಅನಿಲ್ ಕುಮಾರ್, ಕಾರ್ಯನಿರ್ವಾಹಕ ಅಧಿಕಾರಿ ಎಂ.ಬಾಬು, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಟಿ.ಎಸ್. ಗಿರೀಶ್, ಎಎಸ್‌ಐ ನಾಗರತ್ನಮ್ಮ, ಸೆಕ್ಟರಲ್ ಅಧಿಕಾರಿಗಳು, ಎಇ ಜೆಸ್ಕಾಂ ಹಾಗೂ ಇತರೆ ಸಿಬ್ಬಂದಿ ಹಾಜರಿದ್ದರು.

## ಇಡೀ ನಗರ ಸ್ತಬ್ಧಗೊಳಿಸುವುದಲ್ಲ

**(1ನೇ ಪುಟದಿಂದ)** ಈ ಬಗ್ಗೆ ಪೊಲೀಸರು ಹಾಗೂ ಇತರೆ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕಾ ಗುತ್ತದೆ. ಅವರು ಇತರರ ಹಕ್ಕುಗಳನ್ನು ರಕ್ಷಿಸಬೇಕಾಗುತ್ತದೆ. ಪ್ರತಿಭಟನೆ ಹಕ್ಕು ಎಂದರೆ ಇಡೀ ನಗರವನ್ನು ಸ್ತಬ್ಧಗೊಳಿಸುವುದಲ್ಲ ಎಂದು ನ್ಯಾಯಾಲಯ ತಿಳಿಸಿದೆ. ಪೊಲೀಸರು ಹಾಗೂ ಅಧಿಕಾರಿಗಳೂ ಸಹ ಪ್ರತಿಭಟನಾ ನಿರತ ರೈತರು ಯಾವುದೇ ಹಿಂಸೆಯಲ್ಲಿ ತೊಡಗುವಂತೆ ಪ್ರಚೋದನೆ ನೀಡಬಾರದು ಎಂದು ನ್ಯಾಯಾಲಯ ಹೇಳಿದೆ. 1988ರಲ್ಲಿ ರೈತರು ಬೋಟ್ ಕ್ಲಬ್ ಪ್ರತಿಭಟನೆ ನಡೆಸಿದ್ದನ್ನು ಪ್ರಸ್ತಾಪಿಸಿದ ನ್ಯಾಯಲಯ, ಆಗ ರೈತ ಸಂಘಟನೆಗಳು ಇಡೀ ನಗರವನ್ನು ಸ್ತಬ್ಧಗೊಳಿಸಿದ್ದವು ಎಂದು ಹೇಳಿದೆ.

## ಮಲೇಬೆನ್ನೂರು ಪೊಲೀಸ್ ಉದ್ಯಾನವನ ಜಿಲ್ಲೆಗೇ ಮಾದರಿ : ಡಿಸಿ-ಎಸ್ಪಿ ಶ್ಲಾಘನೆ



ಮಲೇಬೆನ್ನೂರು, ಡಿ.17 - ಇಲ್ಲಿನ ಪೊಲೀಸ್ ಠಾಣೆ ಆವರಣದಲ್ಲಿ ನಿರ್ಮಿಸಿರುವ ಪೊಲೀಸ್ ಉದ್ಯಾನವ ನವನ್ನು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರುಗಳು ವಿಶಾಲ ಆವರಣದಲ್ಲಿ ಆಸಕ್ತಿ ವಹಿಸಿ ನಿರ್ಮಿಸಿರುವ ಔಷಧೀಯ ಗುಣಗಳನ್ನು ಹೊಂದಿರುವ ಇಲ್ಲಿನ ಉದ್ಯಾನವನ ಜಿಲ್ಲೆಗೇ ಮಾದರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ವೇಳೆ ಮನೆ ಗೆ ಬೀಗ ಹಾಕಿ ಪರ ಊರಿಗೆ ಹೊರಟಾಗ ಆ ಮನೆಯನ್ನು ಪೊಲೀಸರು ಕಾಯುವ ಹೊಸ ಸೇವೆಯಾದ ಲಾಕ್‌ಡೇಸ್ ಮಾನಿಟರಿಂಗ್ ಸಿಸ್ಟಮ್‌ಗೆ ಚಾಲನೆ ನೀಡಲಾಯಿತು.

ಗ್ರಾಮಾಂತರ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ, ಸಿಪಿಐ ಶಿವಪ್ರಸಾದ್, ಪಿಎಸ್‌ಐ ವೀರಬಸಪ್ಪ, ಹರಿಹರ ಗ್ರಾಮಾಂತರ ಪಿಎಸ್‌ಐ ರವಿಕುಮಾರ್, ಉಪತಹಶೀಲ್ದಾರ್ ಆರ್. ರವಿ, ಪುರಸಭೆ ಮುಖ್ಯಾಧಿಕಾರಿ ಧರಣೇಂದ್ರ ಕುಮಾರ್, ಎಎಸ್‌ಐ ಬಸವರಾಜ್, ಮಲ್ಲಿಕಾರ್ಜುನ್, ಪಟ್ಟಣದ ಸೈಯದ್ ಜಾಕೀರ್, ಎಳೆಹೊಳೆ ಕುಮಾರ್, ಶಿಕ್ಷಕ ಕುಮಾರ್, ಹೊಳೆಸಿರಿಗೆರೆ ಪಾಲಾಕ್ಷಪ್ಪ, ರೈತ ಸಂಘದ ತಾಲ್ಲೂಕು ಅಧ್ಯಕ್ಷ ಕೋಗುಳಿ ಮಂಜುನಾಥ್ ಹಾಗು ಇನ್ನಿತರರು ಹಾಜರಿದ್ದರು.

## ಚುನಾವಣಾ ನಿಧಿಗಾಗಿ ಕೃಷಿ ಕಾಯ್ದೆ : ಕೇಜ್ರಿವಾಲ್

ನವದೆಹಲಿ, ಡಿ. 17 – ಚುನಾವಣಾ ನಿಧಿ ಸಂಗ್ರಹಕ್ಕಾಗಿ ಬಿಜೆಪಿ ಕೃಷಿ ಕಾಯ್ದೆ ಗ ಳನ್ನು ಜಾರಿಗೆ ತಂದಿದೆ ಎಂದು ದೆಹಲಿ ಸಿಎಂ ಅರವಿಂದ ಕೇಜ್ರಿವಾಲ್ ಆರೋಪಿಸಿ ದ್ದಾರೆ.

ದೆಹಲಿ ವಿಧಾನ ಸಭೆಯ ವಿಶೇಷ ಅಧಿವೇಶನದಲ್ಲಿ ಮಾತ ನಾಡುತ್ತಿದ್ದ ಅವರು, ಬಿಜೆಪಿ ಕಳೆದ ಕೆಲ ವರ್ಷಗಳಲ್ಲಿ ಚುನಾವ ಣೆಗಳನ್ನು ದುಬಾರಿ ಮಾಡಿದೆ. ಬಿಜೆಪಿಯ ಚುನಾವಣಾ ನಿಧಿಗಾಗಿ ಕೃಷಿ ಕಾಯ್ದೆಗಳನ್ನು ಜಾರಿಗೆ ತರಲಾಗಿದೆ ಎಂದು ಹೇಳಿದ್ದಾರೆ.

## ಹೋರಾಟಕ್ಕೆ ಅಡ್ಡಿಯಿಲ್ಲ

**(1ನೇ ಪುಟದಿಂದ)** ಸಲುವಾಗಿ ಕೃಷಿ ಪರಿಣಿತರ ನಿಷ್ಪಕ್ಷಪಾತ ಹಾಗೂ ಸ್ವತಂತ್ರ ಸಮಿತಿಯನ್ನು ರಚಿಸಲು ಪರಿಶೀಲಿಸುವುದಾಗಿಯೂ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಅವರ ನೇತೃತ್ವದ ಪೀಠ ಈ ನಿಲುವು ತಿಳಿಸಿತ್ತು. ಆದರೆ, ಪ್ರತಿಭಟನೆ ನಡೆಸುತ್ತಿರುವ ರೈತ ಸಂಘಟನೆಗಳು ತಮ್ಮ ನಿಲುವು ತಿಳಿಸಲು ಸಾಧ್ಯವಾಗದ ಕಾರಣ, ನ್ಯಾಯಾಲಯ ಸಮಿತಿ ರಚನೆಯನ್ನು ತಡೆ ಹಿಡಿದಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ವಿ. ರಾಮಸುಬ್ರಮಣ್ಯಂ ಅವರಿದ್ದಾರೆ.

ರೈತರ ಪ್ರತಿಭಟನೆಗಳಿಂದಾಗಿ ದೆಹಲಿಯ ಜನರಿಗೆ ಆಗುತ್ತಿರುವ ಸಮಸ್ಯೆಗಳ ಕುರಿತು ಸುಪ್ರೀಂ ಕೋರ್ಟ್ ಎದುರು ಅರ್ಜಿಗಳನ್ನು ದಾಖಲಿಸಲಾಗಿದೆ. ಅರ್ಜಿದಾರರೊಬ್ಬರ ಪರವಾಗಿ ಹಾಜರಿದ್ದ ಹಿರಿಯ ವಕೀಲ ಹರೀಶ್ ಸಾಳ್ವೆ, ಪ್ರತಿಭಟನೆಗಳ ಕಾರಣದಿಂದಾಗಿ ದೆಹಲಿಯ 20 ಲಕ್ಷ ಜನರು ಗಂಭೀರ ಸಮಸ್ಯೆ ಎದುರಿಸುತ್ತಿದ್ದಾರೆ. ಅಗತ್ಯ ವಸ್ತುಗಳ ಪೂರೈಕೆಗೆ ತೊಡಕಾಗಿದೆ. ಸರಕುಗಳ ರವಾನೆಯ ಮೇಲೆ ನಿರ್ಬಂಧ ಹೇರಲಾಗಿದೆ ಎಂದು ಹೇಳಿದರು.

ಈ ವಿಷಯವನ್ನು ಪರಿಗಣಿಸಿದ ಪೀಠ, ರೈತರ ಪ್ರತಿಭಟನೆಯಲ್ಲಿ ನ್ಯಾಯಾಲಯ ಮಧ್ಯ ಪ್ರವೇಶಿಸುವುದಿಲ್ಲ. ಪ್ರತಿಭಟನೆ ನಡೆಸುವುದು ಮೂಲಭೂತ ಹಕ್ಕು. ಈ ಹಕ್ಕು ಚಲಾವಣೆ ಸಾರ್ವಜನಿಕ ಸುವ್ಯವಸ್ಥೆಯ ಜೊತೆಗೆ ನಡೆಯಬೇಕಿದೆ. ಪ್ರತಿಭಟನೆಗಳು ಅಹಿಂಸಾತ್ಮಕವಾಗಿ ನಡೆಯುವವರೆಗೆ ಪ್ರತಿಭಟನಾ ಹಕ್ಕಿಗೆ ಯಾವುದೇ ತಡೆ ಇಲ್ಲ. ಪೊಲೀಸರು ಇಲ್ಲವೇ ಪ್ರತಿಭಟನಾಕಾರರಿಂದ ಶಾಂತಿಗೆ ಭಂಗವಾಗದೇ ಇದ್ದರೆ ಪ್ರತಿಭಟನೆಗೆ ಯಾವುದೇ ಅಡ್ಡಿ ಇಲ್ಲ ಎಂದು ನ್ಯಾಯಾಲಯ ಹೇಳಿದೆ.

### ಸಾಧನೆಯ ಸೂತ್ರಗಳು

ಸಾಧನೆ ಒಂದು ದೀರ್ಘ ಪಯಣ
ಅದರಲಿ ಹೂಡು ನೀ ಪಣ
ಕಣದಲಿ ಸವಾಲುಗಳ ಎದುರಿಸೆ
ನಿನಗಾಗಲೇ ಶುಕ್ರದೆಸೆ

ಸಾಧನಾ ರಂಗದಲಿ ಹೆಜ್ಜೆಯಿಡೆ
ಎದುರಾಗುವುದು ಅನೇಕ ಅಡೆತಡೆ
ಸೋತೆನೆಂದು ಕೈ ಚೆಲ್ಲದಿರು
ದುರ್ಬಲನಂತೆ ಹಿಂದೆ ಸರಿಯದಿರು

ಗುರಿಯೆಡೆ ಸಾಗಲು ಶ್ರಮಿಸು
ಸಾಧಕರ ಇತಿಹಾಸವ ಅವಲೋಕಿಸು
ಸಾಧನೆಗೆ ವಿದ್ಯೆಯೇ ಬೇಕೆಂದಿಲ್ಲ
ಶ್ರದ್ಧೆ ಇದ್ದರೆ ಯಶಸ್ಸು ಸಿಗುವುದಲ್ಲ

ಸಾಧನೆಯ ಹಾದಿ ಸುಗಮವಲ್ಲ
ಕಾಲೆಳೆವವರು ಎಲ್ಲೆಡೆ ಇರುವ ರಲ್ಲ
ಕೆಚ್ಚೆದೆಯಿಂದ ಮುನ್ನುಗ್ಗುತ ಸಾವರಿಸಿ
ಎಲ್ಲವನೂ ಮೆಟ್ಟಿ ನಿಲ್ಲಬೇಕಲ್ಲ

ಸಾಧನೆಯ ಮಂತ್ರ ಪಠಿಸೆ ವಶವಾಗದು
ವಿವಿಧ ತಂತ್ರಗಳ ಹೂಡುತ
ದಿಟ್ಟ ಹೆಜ್ಜೆಗಳನಿಡುತ
ಸಾಗದಿರೆ ಫಲವು ಸಿಗದು

ಸಾಧನೆ ಯಾರೊಬ್ಬರ ಸ್ವತ್ತಲ್ಲ
ಇಚ್ಛಾ ಶಕ್ತಿಯ ಮುಂದೆ ಯಾವುದೂ ಅಸಾಧ್ಯವಲ್ಲ
ಗೆಲ್ಲಲೇಬೇಕೆಂಬ ಛಲವಿರಬೇಕು
ತನ್ನಿಂದ ಸಾಧ್ಯವೆಂಬ ಆತ್ಮಬಲ ಬೇಕು.

**- ಎಂ.ಎಸ್.ಮಂಜುಳ ಮಂಜಪ್ಪ, ದಾವಣಗೆರೆ.**

# ಕೇಂದ್ರ ಬ್ರಿಟಿಷರಿಗಿಂತ ಕೀಳಾಗಬಾರದು: ಕೇಜ್ರಿವಾಲ್

ನವದೆಹಲಿ, ಡಿ. 17 – ಕೇಂದ್ರ ಸರ್ಕಾರ ಇತ್ತೀಚೆಗೆ ಜಾರಿಗೆ ತಂದ ಮೂರು ಕಾಯ್ದೆಗಳ ಪ್ರತಿಗಳನ್ನು ದೆಹಲಿ ವಿಧಾನಸಭೆಯಲ್ಲಿ ಹರಿದು ಹಾಕಿರುವ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಕೇಂದ್ರ ಸರ್ಕಾರ ಬ್ರಿಟಿಷರಿಗಿಂತ ಕೀಳಾಗಬಾರದು ಎಂದಿದ್ದಾರೆ.


ಕೊರೊನಾ ಸೋಂಕಿನ ನಡುವೆ ಸಂಸತ್ತಿನಲ್ಲಿ ಕೃಷಿ ಕಾಯ್ದೆಗಳನ್ನು ಜಾರಿಗೆ ತರುವ ಅಗತ್ಯವೇನಿತ್ತು? ರಾಜ್ಯಸಭೆಯಲ್ಲಿ ಮತದಾನ ವಾಗದೇ ಇದೇ ಮೊದಲ ಬಾರಿಗೆ ಮೂರೂ ಕಾಯ್ದೆಗಳನ್ನು ಜಾರಿಗೆ ತರಲಾಗಿದೆ. ಈ ಮೂರೂ ಕೃಷಿ ಕಾಯ್ದೆಗಳನ್ನು ಈ ಸದನದಲ್ಲಿ ಹರಿಯುತ್ತೇನೆ. ಕೇಂದ್ರ ಸರ್ಕಾರ ಬ್ರಿಟಿಷ್ ಸರ್ಕಾರಕ್ಕಿಂತ ಕೀಳಾಗಬಾರದು ಎಂದವರು ಹೇಳಿದ್ದಾರೆ.

ಪ್ರತಿಯೊಬ್ಬ ರೈತ ಭಗತ್ ಸಿಂಗ್ ಆಗುತ್ತಿದ್ದಾನೆ. ರೈತರ ಧ್ವನಿ ಕೇಳುವಂತಾಗಲು ಬಿಜೆಪಿ ಸರ್ಕಾರ ಇನ್ನೆಷ್ಟು ಬಲಿ ಕೇಳಲಿದೆ ಎಂದವರು ಪ್ರಶ್ನಿಸಿದ್ದಾರೆ. ಕೇಂದ್ರ ಸರ್ಕಾರ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕೆಂದು ಒತ್ತಾಯಿಸಲು ದೆಹಲಿ ಸರ್ಕಾರ ಒಂದು ದಿನದ ವಿಶೇಷ ಅಧಿವೇಶನವನ್ನು ಕರೆದಿತ್ತು. ಕೇಜ್ರಿವಾಲ್ ನಂತರ ಆಮ್ ಆದ್ಮಿ ಪಾರ್ಟಿ ಶಾಸಕರೂ ಸಹ ಕಾಯ್ದೆಗಳ ಪ್ರತಿಗಳನ್ನು ಹರಿದು ತೂರಿದರು. ವಿಧಾನಸಭೆಯ ಬಾವಿಗೆ ನುಗ್ಗಿ ಪ್ರತಿಭಟನೆಯನ್ನೂ ನಡೆಸಿದರು.



ಕೃಷಿ ಕಾಯ್ದೆಗಳ ಪ್ರತಿಗಳನ್ನು ದೆಹಲಿ ವಿಧಾನಸಭೆಯಲ್ಲಿ ಹರಿದ ಕೇಜ್ರಿವಾಲ್, ಹಾಗೂ ಶಾಸಕರು

# ಅಪರ ಜಿಲ್ಲಾಧಿಕಾರಿ ಮನೆಯಲ್ಲಿ ಕಳ್ಳತನ





**(1ನೇ ಪುಟದಿಂದ)** ಹಾಲು ಉಕ್ಕಿಸಿ, ಪೂಜೆ ಮಾಡಿದ್ದರು. ಈ ಮನೆಯ ಗೃಹ ಪ್ರವೇಶವೆಂಬ ಕಾರಣಕ್ಕೆ ಬೆಳ್ಳಿ ದೀಪಗಳು, ಬೆಳ್ಳಿ ದೇವರ ಮೂರ್ತಿ ಇಟ್ಟು ಪೂಜೆ ಮಾಡಿದ್ದರು. ಅಂದೇ ಹೊಸ ಮನೆಗೆ ಕೆಲವು ಸಾಮಾನುಗಳನ್ನು ಸಾಗಿಸಿದ್ದರು. ಗುರುವಾರದಿಂದ ನೂತನ ಮನೆಯಲ್ಲಿ ವಾಸ್ತವ್ಯ ಮಾಡಲು ಹಳೆಯ ಮನೆಯ ಸಾಮಾನುಗಳನ್ನೆಲ್ಲಾ ಜೋಡಿಸಿಕೊಂಡು ತರಲು ನಿರ್ಧರಿಸಿದ್ದರು. ಆದರೆ ನೂತನ ಮನೆಯಲ್ಲಿ ವಾಸ್ತವ್ಯ ಹೂಡದೇ ಬೀಗ ಹಾಕಿ ಹಳೇ ಮನೆಯಲ್ಲಿ ರಾತ್ರಿ ತಂಗಿದ್ದರು.

ಇದನ್ನೇ ಗಮನಿಸಿರುವ ಕಳ್ಳರು ನೂತನ ಮನೆಯ ಹಿಂಬಾಗಿಲನ್ನು ಮುರಿದು ಒಳಗೆ ಪ್ರವೇಶಿಸಿ ಬೆಳ್ಳಿ ದೀಪಗಳು, ಬೆಳ್ಳಿ ವಿಗ್ರಹಗಳನ್ನು ಕಳವು ಮಾಡಿದ್ದಾರೆ.

ಘಟನಾ ಸ್ಥಳಕ್ಕೆ ವಿದ್ಯಾನಗರ ಪೊಲೀಸ್ ಠಾಣೆಯ ಸಬ್ ಇನ್ ಸ್ಪೆಕ್ಟರ್ ರೂಪಾ ತೆಂಬದ್ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ. ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಖರೀದಿ ಕೇಂದ್ರದತ್ತ ರೈತರ ನೀರಸ ಚಿತ್ತ

**(1ನೇ ಪುಟದಿಂದ)** ಹೆಕ್ಟೇರ್ ಪ್ರದೇಶ ದಲ್ಲಿ ಭತ್ತ ಬೆಳೆಯಲಾಗಿದ್ದು, ಸುಮಾರು 3.30 ಲಕ್ಷ ಟನ್ ಭತ್ತ ಉತ್ಪಾದನೆಯಾಗುವ ನಿರೀಕ್ಷೆ ಇದೆ. ಆದರೆ ಸರ್ಕಾರದ ಬಿಗಿ ಮಾನದಂ ಡಗಳು, ಪ್ರಚಾರದ ಕೊರತೆ ಮುಂತಾದ ಕಾರಣಗಳಿಂದಾಗಿ ಖರೀದಿ ಕೇಂದ್ರಗಳು ಬಣಗುಡುತ್ತಿವೆ.

ಕೃಷಿ ಇಲಾಖೆಯಿಂದ ರೈತರು (ಫ್ರೂಟ್ಸ್) ಗುರುತಿನ ಸಂಖ್ಯೆಯಯನ್ನು ಕಡ್ಡಾಯವಾಗಿ ಖರೀದಿ ಕೇಂದ್ರಕ್ಕೆ ಹಾಜರುಪಡಿಸಬೇಕಿದೆ. ಈ ಸಂಖ್ಯೆಯ ಆಧಾರದಲ್ಲಿ ನೋಂದಣಿ ಸಾಧ್ಯವಾ ಗುತ್ತದೆ. ಆದರೆ ಫ್ರೂಟ್ಸ್ ತಂತ್ರಾಂಶದ ಬಗ್ಗೆ ರೈತರಿಗೆ ಸಮರ್ಪಕ ಮಾಹಿತಿ ಲಭ್ಯವಾಗಿಲ್ಲ.

ಜಿಲ್ಲೆಯಲ್ಲಿ ಡಿ.30 ರಿಂದ ಭತ್ತ ಖರೀದಿ ಪ್ರಕ್ರಿಯೆ ಆರಂಭವಾಗಿದ್ದು, ಇಲ್ಲಿಯವರೆಗೆ 1832.73 ಕ್ವಿಂಟಾಲ್ ಭತ್ತವನ್ನು ಮಾತ್ರ ಮಾರಾಟ ಮಾಡಲು ಕೇವಲ 371 ಜನರು ಹೆಸರು ನೋಂದಾಯಿಸಿಕೊಂಡಿದ್ದಾರೆ.

ದಾವಣಗೆರೆ ತಾಲ್ಲೂಕಿನಲ್ಲಿ 50 ರೈತರು 2582.68 ಕ್ವಿಂಟಾಲ್, ಹರಿಹರ 107 ರೈತರು, 6100.66 ಕ್ವಿಂಟಾಲ್ ಹಾಗೂ ಹೊನ್ನಾಳಿ ತಾಲ್ಲೂಕಿನಲ್ಲಿ 214 ರೈತರು 9640.39 ಕ್ವಿಂಟಾಲ್ ಭತ್ತ ಮಾರಾಟ ಮಾಡಲು ಹೆಸರು ನೋಂದಾಯಿಸಿಕೊಂಡಿ ದ್ದಾರೆ. ಕಳೆದ ಬಾರಿ ಜಿಲ್ಲೆಯಲ್ಲಿ ಬೆಂಬಲ ಬೆಲೆ ಯೋಜನೆಯಡಿ ಸುಮಾರು 40 ಸಾವಿರ ಕ್ವಿಂ. ನಷ್ಟು ಭತ್ತ ಖರೀದಿ ಮಾಡಲಾಗಿತ್ತು.

**ರಾಗಿ ಖರೀದಿ ನೀರಸ:** ಇನ್ನೂ ರಾಗಿ ಖರೀದಿಗಾಗಿಯೂ ರೈತರು ದಾಖಲಾತಿಗಳೊಂದಿಗೆ ಹೆಸರು ನೋಂದಣಿ ಮಾಡಿಸಿಕೊಳ್ಳಬೇಕಾಗಿದ್ದು, ದಾವಣಗೆರೆ ತಾಲ್ಲೂಕಿನಲ್ಲಿ ಗುರುವಾರ ಕೇವಲ 3 ಜನ ರೈತರು ಹೆಸರು ನೋಂದಾಯಿಸಿದ್ದಾರೆ.

ಜಿಲ್ಲೆಯ ಹರಿಹರ ತಾಲ್ಲೂಕಿನಲ್ಲಿ ಬುಧವಾರ ಸಂಜೆಯವರೆಗೆ 50 ಜನ ರೈತರು 1559.49 ಕ್ವಿಂಟಾಲ್ ರಾಗಿ ಮಾರಾಟಕ್ಕೆ ಹೆಸರು ನೋಂದಾಯಿಸಿದ್ದರೆ, ಜಗಳೂರು ತಾಲ್ಲೂಕಿನ 3 ರೈತರು 141 ಕ್ವಿಂಟಾಲ್ ರಾಗಿ ಕೊಡಲು ಹೆಸರು ಕೊಟ್ಟಿದ್ದಾರೆ.

**ಚುನಾವಣೆ ಬ್ಯುಸಿ:** ಸದ್ಯ ಗ್ರಾಮ ಪಂಚಾಯ್ತಿ ಚುನಾವಣೆ ನಡೆಯುತ್ತಿದ್ದು, ಹಳ್ಳಿಗರು ಚುನಾವಣಾ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಕಾರಣದಿಂದಾಗಿ ರೈತರ ಆಗಮನ ತುಸು ತಡವಾಗಬಹುದು ಎನ್ನುತ್ತಾರೆ ಅಧಿಕಾರಿಗಳು.

**ಮಧ್ಯವರ್ತಿಗಳಿಗೆ ಲಾಭ:** ಈಗಾಗಲೇ ಅರ್ಧಕ್ಕಿಂತ ಹೆಚ್ಚು ರೈತರು ರಾಗಿ ಮಾರಾಟ ಮಾಡಿದ್ದಾರೆ. ಸರ್ಕಾರ ತಡವಾಗಿ ಖರೀದಿ ಕೇಂದ್ರ ಆರಂಭಿಸಿದ್ದು, ಇದರ ಲಾಭವನ್ನು ಮಧ್ಯವರ್ತಿಗಳು ಪಡೆದುಕೊಳ್ಳಲಿದ್ದಾರೆ ಎಂಬುದು ರೈತರ ಆರೋಪ.

ರೈತರೇ ನೇರವಾಗಿ ಖರೀದಿ ಕೇಂದ್ರಕ್ಕೆ ಬಂದು ಆಧಾರ್ ಕಾರ್ಡ್, ಬ್ಯಾಂಕ್ ಮಾಹಿತಿ ಮುಂತಾದ ದಾಖಲಾತಿ ನೀಡಿ ಹೆಸರು ನೋಂ ದಾಯಿಸಿಕೊಳ್ಳಬೇಕು. ರೈತರ ಖಾತೆಗೆ ನೇರ ವಾಗಿ ಹಣ ಸಂದಾಯವಾಗುತ್ತದೆ ಎಂಬುದು ಅಧಿಕಾರಗಳ ಮಾತು. ಆದರೆ ದಲ್ಲಾಳಿಗಳೇ ರೈತರ ದಾಖಲೆಗಳನ್ನು ತಮ್ಮಲ್ಲಿಟ್ಟುಕೊಂಡು ಖರೀದಿ ಕೇಂದ್ರಕ್ಕೆ ಹೆಸರು ನೋಂದಾಯಿಸು ತ್ತಾರೆ. ರೈತನ ಖಾತೆಗೆ ಹಣ ಜಮೆಯಾದ ನಂತರ ರೈತರಿಂದ ಪಡೆಯುತ್ತಾರೆ. ಇದರಿಂದ ರೈತನಿಗೆ ಅನುಕೂಲವಾಗದು ಎನ್ನುವುದು ರೈತ ಮುಖಂಡರ ಆರೋಪವಾಗಿದೆ.

# ತಂಬಾಕು ಚಟದಿಂದ ಸಮಾಜದ ಮೇಲೆ ದುಷ್ಪರಿಣಾಮ

## ತಂಬಾಕು ನಿಯಂತ್ರಣ ಕಾರ್ಯಾಗಾರದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶ ಸಾಬಪ್ಪ

ದಾವಣಗೆರೆ, ಡಿ.17- ದುಷ್ಪರಿಣಾಮಗಳ ಬಗ್ಗೆ ತಿಳಿದೂ ತಂಬಾಕಿನ ದುಶ್ಚಟಕ್ಕೆ ಬಲಿಯಾಗುತ್ತಿರುವ ಯುವಜನತೆಗೆ ಈ ಬಗ್ಗೆ ಹೆಚ್ಚಿನ ಅರಿವು, ಮಾನಸಿಕ ಸ್ವಾಸ್ಥ್ಯದ ಮಹತ್ವ ಮತ್ತು ತಂಬಾಕು ನಿಯಂತ್ರಣ ಕಾಯ್ದೆಯ ಬಗ್ಗೆ ತಿಳುವಳಿಕೆ ಮೂಡಿಸುವಲ್ಲಿ ಇಂತಹ ತರಬೇತಿಗಳು ಸಹಕಾರಿಯಾಗಲಿವೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಾಬಪ್ಪ ತಿಳಿಸಿದರು.

ಮಂಗಳವಾರ ನಗರದ ಚೇತನ ಹೋಟೆಲ್‌ನಲ್ಲಿ ಆಡಳಿತ ವೈದ್ಯಾಧಿಕಾರಿಗಳು ಹಾಗೂ ವೈದ್ಯಾಧಿಕಾರಿಗಳಿಗೆ ತಂಬಾಕು ನಿಯಂತ್ರಣ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನ ಕುರಿತು ಏರ್ಪಡಿಸಲಾಗಿದ್ದ ಒಂದು ದಿನದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಮನೋಲ್ಲಾಸಕ್ಕಾಗಿ ಅಥವಾ ಇನ್ನಾವುದೋ ಒತ್ತಡದಿಂದಾಗಿ ಆರಂಭವಾದ ತಂಬಾಕಿನ ಸೇವನೆ ಚಟವಾಗಿ ಪರಿಣಮಿಸಿ ಅನೇಕ ದೈಹಿಕ ಮತ್ತು ಮಾನಸಿಕ ವ್ಯಾದಿಗಳಿಗೆ ಕಾರಣವಾಗಿ ಯುವಜನತೆಗೆ, ಅವರ ಕುಟುಂಬ ಮತ್ತು ಸುತ್ತಲಿನ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದರು.



ಆರೋಗ್ಯ, ಪೊಲೀಸ್, ಕಾನೂನು ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಅರಿವು ಮತ್ತು ತಂಬಾಕು ನಿಯಂತ್ರಣ ಕಾಯ್ದೆ ಅನುಷ್ಠಾನ ಕಾರ್ಯಕ್ರಮಗಳನ್ನು ಸರ್ಕಾರ ಮಾಡುತ್ತಿದೆ. ವೈದ್ಯರು ತಮ್ಮ ವ್ಯಾಪ್ತಿಯಲ್ಲಿ ಬರುವವರಿಗೆ ಜಾಗೃತಿ ಮೂಡಿಸುವ ಮೂಲಕ, ಭಿತ್ತಿಪತ್ರಗಳು, ಪೋಸ್ಟರ್‌ಗಳ ಮೂಲಕವೂ ಜನರಲ್ಲಿ ಅರಿವು ಮೂಡಿಸುವುದರಿಂದ ತಂಬಾಕು ನಿಯಂತ್ರಣ ಸಾಧ್ಯ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸದಸ್ಯ ಕಾರ್ಯದರ್ಶಿ ಡಾ.ನಾಗರಾಜ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಳೆದ 17 ವರ್ಷಗಳಿಂದ ತಂಬಾಕು ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಹದಿಹರೆಯದವರಲ್ಲೇ ತಂಬಾಕು ಉತ್ಪನ್ನ ಬಳಕೆ ಹೆಚ್ಚುತ್ತಿರುವ ಹಿನ್ನೆಲೆ ಯಲ್ಲಿ ಸರ್ಕಾರ ಅನೇಕ ಸಮೀಕ್ಷೆ ನಡೆಸಿ ನಿಯಂತ್ರಣ, ಅರಿವು ಕಾರ್ಯಕ್ರಮ ಹಾಕಿಕೊಳ್ಳುತ್ತಿದೆ ಎಂದರು.

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಅರುಣ್‌ಕುಮಾರ್.ಎಲ್.ಹೆಚ್ ಮಾತನಾಡಿ, ಪ್ರತಿ ವರ್ಷ ವಿಶ್ವಾದ್ಯಂತ 60 ಲಕ್ಷಕ್ಕಿಂತ ಹೆಚ್ಚು ಜನರು ತಂಬಾಕು ಸೇವನೆಯ ಕಾರಣದಿಂದ ಸಾವನ್ನಪ್ಪುತ್ತಿದ್ದಾರೆ ಎಂಬುದು ಕಳವಳಕಾರಿ ವಿಷಯ ಎಂದರು.

ಜಿಲ್ಲಾ ಕ್ಷಯರೋಗ ನಿವಾರಣಾಧಿಕಾರಿ ಹಾಗೂ ಮನೋವೈದ್ಯ ಡಾ.ಗಂಗಾಧರ್. ಕೆ.ಹೆಚ್ ತಂಬಾಕಿನಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಉಪನ್ಯಾಸ ನೀಡಿದರು. ರಾಜ್ಯ ತಂಬಾಕು ನಿಯಂತ್ರಣ ಘಟಕದ ವಿಭಾಗೀಯ ಸಂಯೋಜಕ ಮಹಾಂತೇಶ್ ಉಳ್ಳಾಗಡ್ಡಿ ಇವರು ಕೋಟ್ಪಾ ಕಾಯ್ದೆ ಕುರಿತು ಉಪನ್ಯಾಸ ನೀಡಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಜಿ.ಡಿ. ರಾಘವನ್ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದ ಜಿಲ್ಲಾ ಸಲಹೆಗಾರ ಸತೀಶ್ ಕಲಹಾಳ್ ಉಪಸ್ಥಿತರಿದ್ದರು. ಜಿಲ್ಲಾ ಆರೋಗ್ಯ ಮೇಲ್ವಿಚಾರಕ ಎಂ.ವಿ.ಹೊರಕೇರಿ ಸ್ವಾಗತಿಸಿದರು. ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದ ಸಮಾಜ ಕಾರ್ಯಕರ್ತ ಕೆ.ಪಿ ದೇವರಾಜ್ ನಿರೂಪಿಸಿ ವಂದಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಗಳ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

# ಉದ್ದೇಶಿತ ರಾಸಾಯನಿಕ ಗೊಬ್ಬರ ಕಾರ್ಖಾನೆ ಸ್ಥಾಪನೆ: ಕಾರ್ಯಸಾಧ್ಯತೆ ವರದಿ ಸಲ್ಲಿಕೆಗೆ ಸಂಸದರ ಸೂಚನೆ



ದಾವಣಗೆರೆ, ಡಿ.17 - ಹರಿಹರ ತಾಲ್ಲೂಕು ಸಾರಥಿ-ಕರಲಹಳ್ಳಿ ಬಳಿ ಉದ್ದೇಶಿತ ರಾಸಾಯನಿಕ ಗೊಬ್ಬರ ಕಾರ್ಖಾನೆಯನ್ನು ಸ್ಥಾಪಿಸಲು ಸಕಾರಾತ್ಮಕ ವರದಿ ಸಿದ್ಧಪಡಿಸಿ ಸಚಿವಾಲಯಕ್ಕೆ ತ್ವರಿತಗತಿಯಲ್ಲಿ ಸಲ್ಲಿಸುವಂತೆ ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಐಡಿಪಿಎಲ್ ಹೆಚ್ಚುವರಿ ಪ್ರಧಾನ ವ್ಯವಸ್ಥಾಪಕ ವಿಕಾಸ್‌ಗೌಡ ಅವರಿಗೆ ಸೂಚನೆ ನೀಡಿದರು.

ಫೆಡರೇಶನ್ ನೀಡಿದ ಮಾಹಿತಿ ಆಧಾರದ ಮೇಲೆ ಕೇಂದ್ರ ಸರ್ಕಾರದ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯದ ಅಧೀನದಲ್ಲಿರುವ ದೆಹಲಿಯ ಪ್ರಾಜೆಕ್ಟ್ ಅಂಡ್ ಡೆವಲಪ್‌ಮೆಂಟ್ ಇಂಡಿಯಾ ಲಿ. (ಐಡಿಪಿಎಲ್) ತಂಡ ಭೇಟಿ ನೀಡಿ, ನಂತರ ಜಿ.ಎಂ.ಐ.ಟಿ ಅತಿಥಿ ಗೃಹದಲ್ಲಿ ಇಂದು ನಡೆದ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕಾರ್ಖಾನೆ ಸ್ಥಾಪನೆಗೆ ಸಂಬಂಧಿಸಿದಂತೆ ಅಗತ್ಯ ಕ್ರಮಗಳ ಬಗ್ಗೆ ಜಿಲ್ಲಾಧಿಕಾರಿಗಳು ಗಮನ ಹರಿಸಿದ್ದಾರೆ ಎಂದರು.


ಮಾಜಿ ಸಚಿವ ಅನಂತಕುಮಾರ್ ಕಾಳಜಿ ವಹಿಸಿ ದಾವಣಗೆರೆ ಜಿಲ್ಲೆಗೆ ರಾಸಾಯನಿಕ ಗೊಬ್ಬರ ಕಾರ್ಖಾನೆಗೆ ತಾತ್ವಿಕ ಅನುಮೋದನೆ ನೀಡಿದ್ದಾರೆ. ಹಾಲಿ ಸಚಿವರಾದ ಸದಾನಂದ ಗೌಡ ಅವರು ಶೀಘ್ರಗತಿಯಲ್ಲಿ ಕೆಲಸ ಮಾಡಲು ಮುಂದಾಗಿದ್ದಾರೆ ಎಂದು ಹೇಳಿದ್ದಾರೆ.

ದಾವಣಗೆರೆ ಜಿಲ್ಲಾಡಳಿತ ರಾಜ್ಯ ಮಾರ್ಕೆಟಿಂಗ್ ಫೆಡರೇಶನ್ ಕೆಐಎಡಿಬಿ ದಾವಣಗೆರೆ, ಕೇಂದ್ರ ರಾಸಾಯನಿಕ ಗೊಬ್ಬರ ಸಚಿವಾಲಯದ ಅಧೀನ ಸಂಸ್ಥೆಗಳ ಸಹಮತದೊಂದಿಗೆ ಕಾರ್ಯನಿರ್ವಹಿಸಿ ಮಹತ್ವದ ಕಾರ್ಯ ಯಶಸ್ವಿಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು. ರಾಸಾಯನಿಕ ಗೊಬ್ಬರ ಕಾರ್ಖಾನೆ ಸ್ಥಾಪನೆಗೆ ಅಗತ್ಯವಿರುವ ನೀರಿನ ಲಭ್ಯತೆ, ವಿದ್ಯುತ್ ಗ್ರಿಡ್‌ಗಳ ಅಂತರ, ಗ್ಯಾಸ್ ಪೈಪ್‌ಲೈನ್, ಜಮೀನಿನ ಮಣ್ಣಿನ ಗುಣಮಟ್ಟ, ಸಾರಿಗೆ ವ್ಯವಸ್ಥೆ, ಹತ್ತಿರದ ವಿಮಾನ ನಿಲ್ದಾಣದ ಮಾಹಿತಿ, ರೈಲ್ವೆ ನಿಲ್ದಾಣಗಳ ಮಾಹಿತಿ ಕುರಿತಂತೆ ಸಮಗ್ರ ಮಾಹಿತಿ ಸಂಗ್ರಹಿಸಿದ ಅಧಿಕಾರಿಗಳ ತಂಡ ಸಂಸದರೊಂದಿಗೆ ಚರ್ಚಿಸಿತು.

ಐಡಿಪಿಎಲ್ ಹೆಚ್ಚುವರಿ ಪ್ರಧಾನ ವ್ಯವಸ್ಥಾಪಕ ವಿಕಾಸ್‌ಗೌಡ ಮಾತನಾಡಿ, ಇಂದು ಸಂಗ್ರಹಿಸಿರುವ ಮಾಹಿತಿಗಳನ್ನು ಆಧರಿಸಿ ಸಚಿವಾಲಯಕ್ಕೆ ಕಾರ್ಯಸಾಧ್ಯತೆ ವರದಿ ಸಲ್ಲಿಸುವುದಾಗಿ ತಿಳಿಸಿದರು.

ಜಿಎಂಐಟಿ ಅತಿಥಿ ಗೃಹದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಐಡಿಪಿಎಲ್ ಹೆಚ್ಚುವರಿ ಮಹಾಪ್ರಬಂಧಕ ವಿಕಾಸ್‌ಗೌಡ, ಮಾರ್ಕೆಟಿಂಗ್ ಫೆಡರೇಷನ್ ಕಾರ್ಯಪಾಲಕ ಅಭಿಯಂತರ ಮಂಜುನಾಥ್, ಮಾರ್ಕೆಟಿಂಗ್ ಫೆಡರೇಷನ್ ನಿರ್ದೇಶಕರಾದ ಮಾಧುರಿ ಗಿರೀಶ್ ಮತ್ತಿತರರಿದ್ದರು.

## ಹೊಸ ಲೇಔಟ್ ನಿರ್ಮಾಣಕ್ಕೆ ಸಿದ್ಧತೆ : ಪರಿಶೀಲನೆ



ದಾವಣಗೆರೆ, ಡಿ.17- ದೂಡಾದಿಂದ ಹೊಸ ಲೇಔಟ್ ನಿರ್ಮಾಣ ನಿರ್ಧಾರದ ಹಿನ್ನೆಲೆಯಲ್ಲಿ ನಗರ ಪಾಲಿಕೆ ವ್ಯಾಪ್ತಿಗೆ ಬರುವ ರಾಷ್ಟ್ರೀಯ ಹೆದ್ದಾರಿ ಸಮೀಪದ ಹಳೇ ಕುಂದುವಾಡಕ್ಕೆ ದಾವಣಗೆರೆ-ಹರಿಹರ ನಗರಾಭಿ ವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜ ನಹಳ್ಳಿ ಶಿವಕುಮಾರ್ ಅವರು ರೈತರ ಜಮೀನುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ರೈತರು, ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ, ಕೆಲ ದಿನಗಳಲ್ಲಿ ಇಲ್ಲಿ ನೂರಕ್ಕೂ ಹೆಚ್ಚು ಎಕರೆ ಜಮೀನು ಖರೀದಿಸಿ ಲೇಔಟ್ ನಿರ್ಮಾಣ ಮಾಡಲು ನಿರ್ಧಾರ ಮಾಡಲಾಗಿದೆ. ಈ ಸಂಬಂಧ ರೈತರು ಕೂಡ ಕೃಷಿ ಜಮೀನು ನೀಡಲು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ ಎಂದು ದೂಡ ಅಧಿಕಾರಿಗಳು ತಿಳಿಸಿದ್ದಾರೆ.

## ನಗರದಲ್ಲಿ ಆಹ್ವಾನಿತ ಟೆನ್ನಿಸ್ ಟೂರ್ನಿ



ದಾವಣಗೆರೆ, ಡಿ.17 - ದಾವಣಗೆರೆ ಜಿಲ್ಲೆ ಟೆನ್ನಿಸ್ ಅಸೋಸಿಯೇಷನ್‌ನಿಂದ ಕಳೆದ ಎರಡು ದಿನಗಳ ಕಾಲ ನಗರದಲ್ಲಿ ಆಹ್ವಾನಿತ ಟೆನ್ನಿಸ್ ಟೂರ್ನಿ ಏರ್ಪಡಿಸಲಾಗಿತ್ತು. ಪಂದ್ಯಾವಳಿಯಲ್ಲಿ ದಾವಣಗೆರೆ, ಚಿತ್ರದುರ್ಗ, ಹೊಸದುರ್ಗ, ಚಳ್ಳಕೆರೆ, ಧಾರವಾಡ, ಸಿಂಧನೂರು, ಬಾಗಲಕೋಟೆ ಮತ್ತು ಮೈಸೂರು ಜಿಲ್ಲೆಗಳಿಂದ 116 ಆಟಗಾರರು 58 ತಂಡಗಳಾಗಿ ಸ್ಪರ್ಧಿಸಿದ್ದು, ಅದರಲ್ಲಿ 60 ವರ್ಷ ಮೇಲಿನವರ ವಿಭಾಗದಲ್ಲಿ ಕೆ.ಪಿ. ಚಂದ್ರಪ್ಪ, ಬಿ.ಕೆ. ನಿಂಗಪ್ಪ ಗೆಲುವು ಸಾಧಿಸಿದರು. ಡಾ.ಸುಬ್ಬರಾವ್ ಮತ್ತು ಮಾರುತಿ ತಂಬೋಳಿ ರನ್ನರ್ಸ್ ಸ್ಥಾನಕ್ಕೆ ತೃಪ್ತಿಪಟ್ಟರು.

45 ವರ್ಷ ಮೇಲ್ಪಟ್ಟ ವಿಭಾಗದಲ್ಲಿ ವೆಂಕಟೇಶ್ ಮತ್ತು ಬವರ್‌ಲಾಲ್ ಮೈಸೂರು ಗೆಲುವು ಸಾಧಿಸಿದ್ದು, ಎಲ್. ದಿನೇಶ್ ಮತ್ತು ಡಿ. ರಮೇಶ್ ಮೈಸೂರು ರನ್ನರ್ಸ್ ಸ್ಥಾನ ಪಡೆದರು. 35 ವರ್ಷ ಮೇಲ್ಪಟ್ಟ ವಿಭಾಗದಲ್ಲಿ ಡಾ. ಸುಜಯ್, ಡಾ. ಯೋಗೀಂದ್ರ ಬಾಗಲಕೋಟೆ ಪ್ರಥಮ ಸ್ಥಾನ ಪಡೆದರೆ, ರಘುನಂದನ್ ಆರ್. ಅಂಬರ್‌ಕರ್ ಮತ್ತು ಆರ್. ಕಿರಣ್ ರನ್ನರ್ಸ್ ಆಗಿ ಹೊರಹೊಮ್ಮಿದ್ದಾರೆ.

ವಿಜೇತರಿಗೆ ಸಂಸ್ಥೆಯ ಅಧ್ಯಕ್ಷ ಡಾ. ಎಸ್.ಎಂ. ಬ್ಯಾಡಗಿ ಮತ್ತು ರಂಜನ ರವಿನಾರಾಯಣ ಅವರು ಪಾರಿತೋಷಕ ನೀಡಿ ಗೌರವಿಸಿದ್ದಾರೆ.

## ವಕ್ಫ್ ವ್ಯವಸ್ಥಾಪನಾ ಸಮಿತಿ ಸದಸ್ಯರ ಚುನಾವಣೆಗೆ ಸದಸ್ಯತ್ವ ನೋಂದಣಿಗೆ ಅಧಿಸೂಚನೆ

ದಾವಣಗೆರೆ ಡಿ.17 - ಹರಿಹರದ ಅಂಜುಮನ್-ಎ-ಇಸ್ಲಾಮ್ (ವಕ್ಫ್) ಸಂಸ್ಥೆಯ ವ್ಯವಸ್ಥಾಪನಾ ಸಮಿತಿಯ ಹನ್ನೊಂದು ಜನ ಸದಸ್ಯರ ಚುನಾವಣೆಗೆ ಸದಸ್ಯತ್ವ ನೋಂದಾಯಿಸಲು ಅಧಿಸೂಚನೆಯನ್ನು ಪ್ರಕಟಿಸಲಾಗಿದೆ.

ಡಿ.12 ಪ್ರಕಟಣೆ ದಿನಾಂಕವಾಗಿದ್ದು, 2020 ರ ಡಿ.21 ರಿಂದ 2021 ರ ಜನವರಿ 16 ರ ಬೆಳಿಗ್ಗೆ 11 ರಿಂದ ಸಂಜೆ 1.30 ರವರೆಗೆ (ಸರ್ಕಾರಿ ರಜೆ ಹೊರತುಪಡಿಸಿ) ನೋಂದಣಿ ಅರ್ಜಿ ನೀಡುವ ದಿನಾಂಕವಾಗಿದೆ. 2021 ರ ಜನವರಿ 21 ರಿಂದ ಬೆಳಿಗ್ಗೆ 11 ರಿಂದ ಸಂಜೆ 4.30 ರವರೆಗೆ (ಸರ್ಕಾರಿ ರಜೆ ಹೊರತುಪಡಿಸಿ) ಭರ್ತಿ ಮಾಡಿದ ಅರ್ಜಿ ಸ್ವೀಕರಿಸುವ ದಿನಾಂಕವಾಗಿದೆ. 2021 ರ ಜನವರಿ 27 ಕರಡು ಮತದಾರರ ಪ್ರತಿ ಪ್ರಕಟಿಸುವ ದಿನಾಂಕವಾಗಿದೆ. 2021 ರ ಜನವರಿ 27 ರಿಂದ ಫೆ.03 ರವರೆಗೆ ಬೆಳಿಗ್ಗೆ 11 ರಿಂದ ಸಂಜೆ 4.30 ರವರೆಗೆ ಮತದಾರರ ಕರಡು ಪ್ರತಿಗೆ ಆಕ್ಷೇಪಣೆ/ಸಲಹೆ ಅರ್ಜಿ ಸಲ್ಲಿಸುವಿಕೆ ದಿನಾಂಕಗಳಾಗಿರುತ್ತವೆ. 2021 ರ ಫೆ.4ರ ಬೆಳಿಗ್ಗೆ 11 ಕ್ಕೆ ಆಕ್ಷೇಪಣೆ/ಸಲಹೆ ಅರ್ಜಿ ವಿಲೇಪಡಿಸುವ ದಿನವಾಗಿರುತ್ತದೆ. ಫೆ.10 ಸರ್ವ ಸದಸ್ಯರ ಅಂತಿಮ ಮತದಾರರ ಪಟ್ಟಿ ಪ್ರಕಟಿಸುವ ದಿನವಾಗಿರುತ್ತದೆ ಎಂದು ಜಿಲ್ಲಾ ವಕ್ಫ್ ಅಧಿಕಾರಿಗಳು ಹಾಗೂ ನೋಂದಣಾಧಿಕಾರಿಗಳು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಚೌಡಾಂಬಿಕಾ ದೇವಿ ಕಾರ್ತಿಕೋತ್ಸವ

ಚೌಡಾಂಬಿಕಾ ದೇವಸ್ಥಾನದ ರಸ್ತೆಯಲ್ಲಿರುವ ಶಾಮನೂರು ಶ್ರೀನಿವಾಸ ಶೆಟ್ಟರ ಸಹೋದರ ಶಾಮನೂರು ಲಕ್ಷ್ಮೀನಾರಾಯಣ ಶೆಟ್ಟರ ಮನೆ ಆವರಣದಲ್ಲಿರುವ ಶ್ರೀ ಚೌಡಾಂಬಿಕಾ ದೇವಿಯ 63ನೇ ವರ್ಷದ ಕಡೆಯ ಕಾರ್ತಿಕ ಮಹೋತ್ಸವ ಇಂದು ನಡೆಯಲಿದೆ.

ಇಂದು ಪ್ರಾತಃಕಾಲ ಶ್ರೀದೇವಿಗೆ ಪಂಚಾಮೃತ ಅಭಿಷೇಕ, ಶ್ರೀಸೂಕ್ತ, ದುರ್ಗಾಸೂಕ್ತ, ಮಹಾಭಿಷೇಕ, ಸಹಸ್ರನಾಮ ಕುಂಕುಮಾರ್ಚನೆ ಅಲಂಕಾರ ಷೋಡಷೋಪಚಾರ, ಮಹಾಮಂಗಳಾರತಿ, ಸಂಜೆ 7 ಗಂಟೆಗೆ ದೀಪಾರಾಧನೆ, ಕಾರ್ತಿಕೋತ್ಸವ ಮಹಾಮಂಗಳಾರತಿ ನಡೆಯಲಿದೆ. ನಾಳೆ ಶನಿವಾರ ಪ್ರಾತಃಕಾಲ ಅಭಿಷೇಕ, ಶ್ರೀಸೂಕ್ತ, ಮಹಾ ಭಿಷೇಕ, ಸಹಸ್ರನಾಮ ಕುಂಕುಮಾರ್ಚನೆ, ಅಲಂಕಾರ, ಷೋಡಷೋಪಚಾರ ಪೂಜೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ನಡೆಯಲಿದೆ.

## ಕೂಡ್ಲಿಗಿ: ಗೃಹ ರಕ್ಷಕದಳ ದಿನಾಚರಣೆ

ಕೂಡ್ಲಿಗಿ, ಡಿ.17- ಪಟ್ಟಣದಲ್ಲಿ ಗೃಹರಕ್ಷಕ ದಳದ ಕೂಡ್ಲಿಗಿ ಘಟಕದಿಂದ ಗೃಹ ರಕ್ಷಕ ದಳ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು.

ಪಟ್ಟಣದಲ್ಲಿ ಪಥ ಸಂಚಲನ ಹಾಗೂ ಅಪರಾಧ ತಡೆ ಜಾಗೃತಿ, ಹೆಲ್ಮೆಟ್ ಜಾಗೃತಿಗಾಗಿ ಬೈಕ್ ಜಾಥಾ ನಡೆಸಿದರು. ಪಥ ಸಂಚಲನಕ್ಕೆ ಹಸಿರು ನಿಶಾನೆ ತೋರುವ ಮೂಲಕ ಸಿಪಿಐ ಪಂಪನಗೌಡ ಚಾಲನೆ ನೀಡಿ ಮಾತನಾಡಿದರು. ಇದೇ ವೇಳೆ ವಿಕಲಚೇತನರ ದಿನಾಚರಣೆಯನ್ನು ಆಚರಿಸಲಾಯಿತು. ದಳದ ಅಧಿಕಾರಿಗಳು ಹಾಗೂ ಸಿಬ್ಬಂದಿವರ್ಗ ಹಾಜರಿದ್ದರು.

## ನೀಲಕಂಠೇಶ್ವರ ಸ್ವಾಮಿ ಕಾರ್ತಿಕ

ದಾವಣಗೆರೆ, ಡಿ.17 - ಸ್ಥಳೀಯ ಕೆಟಿಜೆ ನಗರ, 2ನೇ ಮೇನ್, 14ನೆ ಕ್ರಾಸ್‌ನಲ್ಲಿರುವ ಶ್ರೀ ನೀಲಕಂಠೇಶ್ವರ ದೇವಸ್ಥಾನದಲ್ಲಿ ಇದೇ ದಿನಾಂಕ 21 ರ ಸೋಮವಾರ ಸಂಜೆ 6 ಗಂಟೆಗೆ ಕಾರ್ತಿಕ ದೀಪೋತ್ಸವ ನಡೆಯಲಿದೆ.


### ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶ್ರೀ ಚೌಡೇಶ್ವರಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ವಿನಾಯಕ ಕಾಂಪ್ಲೆಕ್ಸ್, ವಸಂತ ರಸ್ತೆ, ದಾವಣಗೆರೆ ಇದರ ಅಧ್ಯಕ್ಷರಾದ ಶ್ರೀ ಡಿ. ಬಸವರಾಜಪ್ಪ ಬಿನ್ ಲೇಟ್ ಡಿ. ದುಗ್ಗಪ್ಪ ಇವರು, ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರಾ ಸೊತ್ತನ್ನು ಸೊತ್ತಿನ ಮಾಲೀಕರಾದ ಶ್ರೀ ಎಂ.ಬಿ. ಸನಾವುಲ್ಲಾ ಬಿನ್ ಲೇಟ್ ಎಂ. ಬುಡೇನ್ ಸಾಬ್, ವಿಳಾಸ : ಡೋ.ನಂ. 564/1,2 ಇಮಾಂ ನಗರ, ಶಾದಿ ಮಹಲ್ ಮೇನ್ ರೋಡ್, ದಾವಣಗೆರೆ ಇವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿರುತ್ತಾರೆ. ಶ್ರೀ ಎಂ.ಬಿ. ಸನಾವುಲ್ಲಾ ಬಿನ್ ಲೇಟ್ ಎಂ. ಬುಡೇನ್ ಸಾಬ್ ಇವರು ಈ ಹಿಂದೆ ತಾರೀಖು 21.07.2017ರಂದು ದಾವಣಗೆರೆ ಹಿರಿಯ ಉಪ ನೋಂದಣಾಧಿಕಾರಿಗಳವರ ಕಛೇರಿಯಲ್ಲಿ 1ನೇ ಪುಸ್ತಕದ ಸಿ.ಡಿ. ನಂಬರ್ ಡಿವಿಜಿಡಿ 457ರಲ್ಲಿ ಡಿವಿಜಿ-1-06391/2017-18ನೇ ನಂಬರಾಗಿ ರಿಜಿಸ್ಟರ್ ಆಗಿರುವ ಕ್ರಯ ಪತ್ರದ ಮೂಲಕ ಶ್ರೀಮತಿ ಮಹಬೂಬ್ ಬೀ ಕೋಂ ಲೇಟ್ ಟಿ. ಅಬ್ದುಲ್ ರೆಹಮಾನ್‌ಸಾಬ್ ಮತ್ತು ಇವರ ಮಕ್ಕಳಿಂದ ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರಾ ಸ್ವತ್ತನ್ನು ಕ್ರಯಕ್ಕೆ ಪಡೆದು, ಆ ಲಾಗಾಯ್ತು ಶ್ರೀ ಎಂ.ಬಿ. ಸನಾವುಲ್ಲಾ ಇವರ ಸಂಪೂರ್ಣ ಹಕ್ಕುದಾರಿ ಸ್ವಾಧೀನಾನುಭವದಲ್ಲಿರುವ ಮತ್ತು ಸದರಿಯವರ ಹೆಸರಿಗೆ ಖಾತೆ ಇರುವ ಹಾಗೂ ಪೂರಾ ಮಾಲೀಕತ್ವಕ್ಕೆ ಒಳಪಟ್ಟ ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರಾ ಸ್ವತ್ತಾಗಿರುತ್ತದೆ. ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರಾ ಆಸ್ತಿಯ ಬಗ್ಗೆ ಯಾರದಾದರೂ, ಯಾವುದೇ ರೀತಿಯ ತಂಟೆ, ತಕರಾರು, ವ್ಯಾಜ್ಯ, ಆಕ್ಷೇಪಣೆ ವಗೈರೆ ಏನೇ ಇದ್ದರೂ, ಈ ಪ್ರಕಟಣೆ ಪ್ರಕಟವಾದ 7 (ಏಳು) ದಿವಸದೊಳಗಾಗಿ ಲಿಖಿತವಾಗಿ ಹಾಗೂ ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಗೆ ಸಹಿ ಮಾಡಿರುವವರಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಈ ಬಗ್ಗೆ ಯಾರದೂ ಯಾವುದೇ ರೀತಿಯ ಹಕ್ಕು, ಬಾಧ್ಯತೆ, ತಂಟೆ, ತಕರಾರು, ವ್ಯಾಜ್ಯ, ಆಕ್ಷೇಪಣೆ ಇಲ್ಲವೆಂದು ತಿಳಿದು ನನ್ನ ಕಕ್ಷಿಗಾರರು ಸದರಿ ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರಾ ಸೊತ್ತನ್ನು ಮೇಲ್ಕಂಡವರಿಂದ ಕ್ರಯ ಪತ್ರ ನೋಂದಣಿ ಮಾಡಿಕೊಳ್ಳಲು ಸಿದ್ಧರಾಗಿರುತ್ತಾರೆ. ಷೆಡ್ಯೂಲ್ ಸೊತ್ತು ನೋಂದಣಿಯಾದ ನಂತರ ಈ ಬಗ್ಗೆ ಯಾರಿಂದಲಾದರೂ ಯಾವುದೇ ರೀತಿಯ ತಂಟೆ, ತಕರಾರು, ವ್ಯಾಜ್ಯ, ಆಕ್ಷೇಪಣೆಗಳು ಬಂದಲ್ಲಿ ಅವುಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಮತ್ತು ಸದ್ರಿ ಯಾವುದೇ ರೀತಿಯ ಆಕ್ಷೇಪಣೆ, ವಗೈರೆಗಳು ನನ್ನ ಕಕ್ಷಿಗಾರರನ್ನು ಪ್ರತಿಬಂಧಿಸುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

**ಷೆಡ್ಯೂಲ್ :** ದಾವಣಗೆರೆ ಸಿಟಿ 1ನೇ ವಾರ್ಡ್, 1ನೇ ಡಿವಿಜನ್, ಬಾರ್‌ಲೈನ್ ರಸ್ತೆಯಲ್ಲಿರುವ 1959ನೇ ಸಾಲಿನ ಮುನ್ಸಿಪಲ್ ಡೋರ್ ನಂಬರ್ 172/1,2,3 ನಂತರದ ಮುನ್ಸಿಪಲ್ ಡೋರ್ ನಂಬರ್ 96/1,2,3 ಮಹಾನಗರ ಪಾಲಿಕೆಯವರು ನೀಡಿರುವ ಚಾಲ್ತಿ ಡೋರ್ ನಂಬರ್ 96/1,2,3 ಅಳತೆ ಪೂರ್ವ-ಪಶ್ಚಿಮ ಇಪ್ಪತ್ತೊಂದು ಅಡಿ, ಉತ್ತರ-ದಕ್ಷಿಣ ಎಪ್ಪತ್ತೆರಡು ಅಡಿ (21x72 ಅಡಿ= 1512 ಚದುರಡಿ) ಮೀಟರ್‌ನಲ್ಲಿ ಅಳತೆ 6.40x21.94 ಮೀಟರ್ = 140.416 ಚದುರ ಮೀಟರ್ ಉಳ್ಳ ಜಾಗ ಹಾಗೂ ಸದರಿ ಜಾಗದಲ್ಲಿರುವ ನೆಲಮಹಡಿ ಮದ್ರಾಸ್ ಆರ್.ಸಿ.ಸಿ. ವಾಣಿಜ್ಯ ಕಟ್ಟಡ ಒಂದನೇ ಮಹಡಿ ಮುಂಭಾಗ ಕೆಂಪು ಹೆಂಚು ಮತ್ತು ಹಿಂಭಾಗ ಶೀಟ್ ಹೊದಿಕೆ ಉಳ್ಳ ವಾಸದ ಮನೆ, 1512 ಚದುರಡಿ ಸೊತ್ತಿಗೆ ಚಕ್ಕುಬಂದಿ :- ಪೂರ್ವಕ್ಕೆ : ವೇಣುಗೋಪಾಲ್ ಇವರ ಮಕ್ಕಳ ಸೊತ್ತು, ಪಶ್ಚಿಮಕ್ಕೆ : ಸುಭಾಶ್ ಇವರ ಮನೆ, ಉತ್ತರಕ್ಕೆ : ಕನ್ಸರ್‌ವೆನ್ಸಿ, ದಕ್ಷಿಣಕ್ಕೆ : ಬಾರ್‌ಲೈನ್ ರಸ್ತೆ, ಈ ಮಧ್ಯದ ಪೂರಾ ಸೊತ್ತು ಒಂದು ಈ ಸಾರ್ವಜನಿಕ ಪ್ರಕಟಣೆಗೆ ಒಳಪಟ್ಟಿರುತ್ತದೆ.

ಸಹಿ/- ಅಧ್ಯಕ್ಷರು
ಶ್ರೀ ಚೌಡೇಶ್ವರಿ ಕೋ - ಆಪ್. ಸೊಸೈಟಿ ಲಿ.,

ಸಹಿ/- ಎಂ.ಬಿ. ಸನಾವುಲ್ಲಾ
ಸೊತ್ತಿನ ಮಾಲೀಕರ ರುಜು
ಸ್ಥಳ : ದಾವಣಗೆರೆ, ದಿನಾಂಕ : 17.12.2020

ಸಹಿ/- ಡಿ.ಎಸ್. ಶಾಮಸುಂದರ್, ವಕೀಲರು
# 47/4, ವಸಂತ ರಸ್ತೆ, ದಾವಣಗೆರೆ-1.
ಫೊ. : 94805 98965



### ಭಾವನಾ ಸಹಕಾರ ಸಂಘ ನಿಯಮಿತ (ರಿ.)

ಬಿ.ಕೆ. ಹಾಸ್ಟೆಲ್ ಕಟ್ಟಡ, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ-2.

**5ನೇ ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ**

ಮೇಲ್ಕಂಡ ಸಹಕಾರ ಸಂಘದ 2019-20ನೇ ಸಾಲಿನ 5ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ **19.12.2020** ನೇ ಶನಿವಾರ ಬೆಳಿಗ್ಗೆ 11 ಕ್ಕೆ ಸಂಘದ ಅಧ್ಯಕ್ಷರಾದ **ಶ್ರೀ ಕೆ.ಬಿ. ಶಂಕರನಾರಾಯಣ್**‌ರವರ ಅಧ್ಯಕ್ಷತೆಯಲ್ಲಿ ಸಂಘದ ಕಚೇರಿಯಲ್ಲಿ ಏರ್ಪಡಿಸಲಾಗಿದೆ.

- ಆಡಳಿತ ಮಂಡಳಿ



### ಸಾರ್ವಜನಿಕ ಪ್ರಕಟಣೆ

ಶ್ರೀಮತಿ ಬಸಮ್ಮ, ರತ್ನಮ್ಮ, ಗಂಗಮ್ಮ, ಮೀನಾಕ್ಷಿ, ಶೋಭಾ, ಶ್ರೀಮತಿ ಸುಧಾ, ಶ್ರೀಮತಿ ಸುಮ ಎಲ್ಲರೂ ಚಿಕ್ಕತೊಗಲೇರಿ ಗ್ರಾಮದ ಬಸವರಾಜಪ್ಪ ಬಿನ್ ಸಣ್ಣ ಬಸಪ್ಪ ಇವರ ಮಕ್ಕಳಾಗಿದ್ದು, ಇವರು ದಾವಣಗೆರೆ ಸಿವಿಲ್ ಜಡ್ಜ್ (ಕಿರಿಯ ವಿಭಾಗ) ನ್ಯಾಯಾಲಯದಲ್ಲಿ ಅಸಲು ದಾವಾ ನಂ. 332/2020ರ ದಾವೆಯನ್ನು ಬಸವರಾಜಪ್ಪ ಬಿನ್ ಸಣ್ಣ ಬಸಪ್ಪ, ರಂಗಸ್ವಾಮಿ ಬಿನ್ ಬಸವರಾಜಪ್ಪ, ಎಂ.ಹೆಚ್. ಹನುಮಂತಪ್ಪ ಬಿನ್ ನಾಗಮ್ಮ, ಮಾಂತೇಶ ಬಿನ್ ಮಲ್ಲೇಶಪ್ಪ, ರಾಜಪ್ಪ ಬಿನ್ ಗೋವಿಂದಪ್ಪ, ಸಿದ್ದೇಶಿ ಬಿನ್ ಚನ್ನಬಸಪ್ಪ ಹಾಗೂ ಶ್ರೀಮತಿ ಎಸ್.ಜಿ. ಭಾರತಿ ಕೋಂ. ಸಿದ್ದೇಶ್ ಇವರುಗಳ ಮೇಲೆ ಈ ಕೆಳಗೆ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಷೆಡ್ಯೂಲ್ ಸ್ವತ್ತುಗಳಲ್ಲಿ ತಮ್ಮ ಹಿಸ್ಸೆಯನ್ನು ಕೋರಿ ದಾವೆ ಸಲ್ಲಿಸಿರುತ್ತಾರೆ. ದಾವೆಯ ಸಮನ್ಸ್, ಮೇಲೆ ಹೇಳಿರುವ ಪ್ರತಿವಾದಿಗಳಿಗೆ ಜಾರಿಯಾಗಿದ್ದು, ಸದರಿಯವರು ಕೆಳಗೆ ಕಾಣಿಸಿರುವ ಷೆಡ್ಯೂಲ್ ಸ್ವತ್ತುಗಳನ್ನು ಮಾರಾಟ ಮಾಡಲು ಹವಣಿಸುತ್ತಿದ್ದಾರೆಂದು ತಿಳಿದು ಬಂದಿರುತ್ತದೆ. ಆ ರೀತಿ ಮೇಲೆ ಹೇಳಿರುವ ಪ್ರತಿವಾದಿಗಳು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ವತ್ತುಗಳನ್ನು ಯಾರಿಗೂ ಮಾರಾಟ ಮಾಡಬಾರದಾಗಿ ಹಾಗೂ ಮಾರಾಟ ಮಾಡಿದ್ದಲ್ಲಿ ಹಾಗೂ ಯಾರಾದರೂ ಖರೀದಿಸಿದ್ದಲ್ಲಿ ಮುಂದಾಗುವ ಕಷ್ಟ-ನಷ್ಟಗಳಿಗೆ ಖರೀದಿದಾರರೇ ಜವಾಬ್ದಾರರಾಗಿರುತ್ತಾರೆ ಎಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಬಯಸುತ್ತೇವೆ.

**ಷೆಡ್ಯೂಲ್** : 1) ದಾವಣಗೆರೆ ತಾಲ್ಲೂಕು, ಚಿಕ್ಕ ತೊಗಲೇರಿ ಗ್ರಾಮದ ರೀ ಸರ್ವೆ ನಂ. 77/2 ಎಪಿರಲ್ಲಿ 1 ಎಕರೆ 18 ಗುಂಟೆ ಜಮೀನು. ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ, ಗೋಮಾಳ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ ಆಂಜಿನಪ್ಪನ ಜಮೀನು, ದಕ್ಷಿಣಕ್ಕೆ : ಗುಡ್ಡಪ್ಪನವರ ಜಮೀನು. 2) ದಾವಣಗೆರೆ ತಾಲ್ಲೂಕು, ಚಿಕ್ಕ ತೊಗಲೇರಿ ಗ್ರಾಮದ ರೀ. ಸರ್ವೆ ನಂ. 42/1 ರಲ್ಲಿ 0-19 ಗುಂಟೆ ಜಮೀನು, ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ; ಗುರುಶಾಂತಪ್ಪನವರ ಜಮೀನು, ಪಶ್ಚಿಮಕ್ಕೆ : ಪರಶುರಾಮಪ್ಪನ ಜಮೀನು, ಉತ್ತರಕ್ಕೆ ; ಪರಶುರಾಮಪ್ಪನ ಜಮೀನು, ದಕ್ಷಿಣಕ್ಕೆ : ಹನುಮಂತಪ್ಪನ ಜಮೀನು. 3) ದಾವಣಗೆರೆ ತಾಲ್ಲೂಕು, ಚಿಕ್ಕತೊಗಲೇರಿ ಗ್ರಾಮದ ರೀ. ಸರ್ವೆ ನಂ. 42/1 ರಲ್ಲಿ 0-18 ಗುಂಟೆ ಜಮೀನು, ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ : ಸಿದ್ದಪ್ಪನವರ ಜಮೀನು, ಪಶ್ಚಿಮಕ್ಕೇ ಮಹಾದೇವಪ್ಪನವರ ಜಮೀನು, ಉತ್ತರಕ್ಕೆ : ಹನುಮಂತಪ್ಪನವರ ಜಮೀನು, ದಕ್ಷಿಣಕ್ಕೆ : ದೇವೇಂದ್ರಪ್ಪನವರ ಜಮೀನು. 4) ದಾವಣಗೆರೆ ತಾಲ್ಲೂಕು, ಚಿಕ್ಕತೊಗಲೇರಿ ಗ್ರಾಮದ ರೀ. ಸರ್ವೆ ನಂ. 19/9 ಎಪಿರಲ್ಲಿ 1 ಎಕರೆ ಜಮೀನು, ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ : ಕಳವೂರು ಬಸವರಾಜಪ್ಪ (ವೆಂಕಟೇಶ್) ಜಮೀನು, ಪಶ್ಚಿಮಕ್ಕೆ ಇದೇ ಸರ್ವೆ ನಂಬರ್ ಪೈಕಿ ವೆಂಕಟೇಶ್ ಜಮೀನು, ಉತ್ತರಕ್ಕೆ : ಅಂಜಿನಪ್ಪ, ತಿಪ್ಪಣ್ಣ ಮತ್ತು ನಿಂಗಪ್ಪನವರ ಜಮೀನು, ದಕ್ಷಿಣಕ್ಕೆ : ದುರುಗಪ್ಪ, ರಾಮಣ್ಣನವರ ಜಮೀನು.

ಸ್ಥಳ : ದಾವಣಗೆರೆ
ದಿನಾಂಕ : 11.12.2020

ಸಹಿ/- ಕಕ್ಷಿದಾರರ ಪರ ವಕೀಲರು,
(ಬಿ.ಜಿ. ಪ್ರಕಾಶ್) ಮೊ. : 9845315730



### ಮಾನ್ಯ ಘನ ಸಿವಿಲ್ ನ್ಯಾಯಾಲಯ, ಕಿ.ವಿ. ದಾವಣಗೆರೆ.

ಅಸಲು ದಾವೆ ನಂ. 469/2020

ವಾದಿ : **ಬಸವರಾಜ್ ಎಸ್.ಎಂ. ಬಿನ್ ಲೇಟ್ ಷಣ್ಮುಖಪ್ಪ**, ವಯಸ್ಸು ಸುಮಾರು 60 ವರ್ಷ, ಉದ್ಯೋಗ ವಕೀಲರು, ವಾಸ : ಕೆ.ಹೆಚ್.ಬಿ. ಬಡಾವಣೆ, ದಾವಣಗೆರೆ.

ವಿರುದ್ಧ

ಪ್ರತಿವಾದಿಯರು : **1. ಉಪ ನಿರ್ದೇಶಕರು (ಡಿಡಿಪಿಐ)**, ಉಪನಿರ್ದೇಶಕರ ಕಛೇರಿ, ಶಿಕ್ಷಣ ಇಲಾಖೆ, ದಾವಣಗೆರೆ.
**2. ಕ್ಷೇತ್ರ ಶಿಕ್ಷಣ ಅಧಿಕಾರಿ (ಬಿಇಓ)**, ದಾವಣಗೆರೆ ದಕ್ಷಿಣ ವಲಯ, ದಾವಣಗೆರೆ.
**3. ಸಮೂಹ ಸಂಪನ್ಮೂಲ ವ್ಯಕ್ತಿ (ಸಿ.ಆರ್.ಪಿ.)**, ಶಾಮನೂರು ಕ್ಲಸ್ಟರ್, ದಾವಣಗೆರೆ.
**4. ಕೆ.ಜಿ. ಬಸವರಾಜಪ್ಪ ತಂದೆ ಗುರುಬಸಪ್ಪ**, ವಯಸ್ಸು ಸುಮಾರು 71 ವರ್ಷ, ಉದ್ಯೋಗ : ಅಧ್ಯಕ್ಷರು, ಶ್ರೀ ಬಸವೇಶ್ವರ ಎಜುಕೇಷನ್ ಟ್ರಸ್ಟ್, ಬನ್ನಿಕೋಡು ರಸ್ತೆ, ಹಳೇ ಕುಂದುವಾಡ

**ಸಾರ್ವಜನಿಕ ನೋಟೀಸ್**

ಮೇಲೆ ತಿಳಿಸಿದ ವಾದಿಯು ಷೆಡ್ಯೂಲ್ ಸ್ವತ್ತಿನಲ್ಲಿರುವ ಶ್ರೀ ಬಸವೇಶ್ವರ ಇಂಗ್ಲಿಷ್ ಮೀಡಿಯಂ ಕಾನ್ವೆಂಟ್ ಶಾಲೆಯ ಅನುಮತಿಯನ್ನು ರದ್ದುಪಡಿಸಲು ಕೋರಿ ಪ್ರತಿವಾದಿಯರ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತಾರೆ. ನಾಲ್ಕನೆ ಪ್ರತಿವಾದಿಯಾದ ಶ್ರೀ ಕೆ.ಜಿ. ಬಸವರಾಜಪ್ಪ ತಂದೆ ಗುರುಬಸಪ್ಪ ಇವರು ಷೆಡ್ಯೂಲ್ ಸ್ವತ್ತನ್ನು ಶಿಕ್ಷಣ ಇಲಾಖೆಗೆ ಬರೆದುಕೊಟ್ಟು, ಶಾಲೆಯ ಅನುಮತಿಯನ್ನು ಪಡೆದುಕೊಂಡಿದ್ದರು. ಈಗ ಷೆಡ್ಯೂಲ್ ಸ್ವತ್ತನ್ನು ಭೂ ಪರಿವರ್ತನೆ ಆದೇಶ ಮಾಡಿಸಿಕೊಳ್ಳಲು ದಿನಾಂಕ 27.11.2020ರಂದು ಜಿಲ್ಲಾಧಿಕಾರಿಗಳ ಕಛೇರಿಗೆ ಅರ್ಜಿ ಸಲ್ಲಿಸಿದ್ದು, ತದನಂತರ ಮಾರಾಟ ಮಾಡುವ ತರಾತುರಿಯಲ್ಲಿರುವುದು ಹಾಗೂ ಪ್ರೇಮ್ ರೇವಣ್ಣ ಬ್ಯಾಡಗಿ ಎಂಬ ವಿದ್ಯಾರ್ಥಿಯನ್ನು ಸೃಷ್ಟಿ ಮಾಡಿ ದಾಖಲೆಯಲ್ಲಿ ಹೆಸರನ್ನು ಬರೆದುಕೊಂಡು ಸರ್ಕಾರದ ಆರ್.ಟಿ.ಇ. ಹಣವನ್ನು ಪ್ರತಿವರ್ಷವು ಪಡೆದುಕೊಳ್ಳುತ್ತಿರುವರು. ಪ್ರೇಮ್ ರೇವಣ್ಣ ಬ್ಯಾಡಗಿ ಎನ್ನುವ ವಿದ್ಯಾರ್ಥಿ ಬಸವೇಶ್ವರ ಇಂಗ್ಲಿಷ್ ಮೀಡಿಯಂ ಕಾನ್ವೆಂಟ್ ಶಾಲೆಯಲ್ಲಿ ವಿದ್ಯೆಯನ್ನು ಕಲಿಯುತ್ತಿರಲಿಲ್ಲ. ಕೆ.ಜಿ.ಬಸವರಾಜಪ್ಪನವರು ಶಿಕ್ಷಣ ಇಲಾಖೆಗೆ ಮತ್ತು ಸರ್ಕಾರಕ್ಕೆ ವಂಚನೆ ಮತ್ತು ಮೋಸ ಮಾಡುತ್ತಿರುವರು. ಶಾಲೆಯ ಅನುಮತಿಯನ್ನು ರದ್ದುಪಡಿಸಲು ನ್ಯಾಯಾಲಯದಲ್ಲಿ ವಾದಿಯು ದಾವೆಯನ್ನು ಸಲ್ಲಿಸಿರುವರು. ಸಾರ್ವಜನಿಕರು ಸದರಿ ದಾವೆಯಲ್ಲಿ ವಾದಿಯರಾಗಲೀ, ಪ್ರತಿವಾದಿಯರಾಗಲೀ ಹಾಜರಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಲು ದಿನಾಂಕ : 30.01.2021ರಂದು ದಿನಾಂಕವನ್ನು ನಿಗದಿಪಡಿಸಲಾಗಿದೆ.

ನ್ಯಾಯಾಲಯದ ಮೊಹರಿನೊಂದಿಗೆ ಇಂದು ದಿನಾಂಕ 17.12.20ರಂದು ಆದೇಶಿಸಲಾಗಿದೆ.

ಷೆಡ್ಯೂಲ್ : ಪೂರ್ವಕ್ಕೆ : ಹಾಲಿ ಭೂ ಪರಿವರ್ತನೆಯಾಗಿರುವ 1 ಎಕರೆ 20 ಗುಂಟೆ ಜಮೀನು ಪಶ್ಚಿಮಕ್ಕೆ : ಗೃಹ ಮಂಡಳಿ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ ಚಾನಲ್

ಸಹಿ/- ವಕೀಲರು
**ಶ್ರೀಮತಿ ಶಶಿಕಲ ಎಂ.ಎನ್., ಶ್ರೀ ಸಂಗಪ್ಪ ಡಿ.ಎನ್.**
ಡಿಸಿಎಂ ಟೌನ್‌ಶಿಪ್, ದಾವಣಗೆರೆ.

ಸಹಿ/- **ಶಿರಸ್ತೇದಾರರು**
ಸಿವಿಲ್ ನ್ಯಾಯಾಲಯ, ಕಿ.ವಿ. ದಾವಣಗೆರೆ.



### ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿ.,

ಮಂಡಿಪೇಟೆ, ದಾವಣಗೆರೆ- 577 001.

**ಬ್ಯಾಂಕಿನ ಷೇರುದಾರರ ಗಮನಕ್ಕೆ**

ಮಾನ್ಯ ಸದಸ್ಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಕೋವಿಡ್-19 ಸಾಂಕ್ರಾಮಿಕ ರೋಗದ ಪ್ರಯುಕ್ತ ಸಹಕಾರ ಬ್ಯಾಂಕುಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ವಿಡಿಯೋ ಕಾನ್ಫರೆನ್ಸ್/ವರ್ಚ್ಯುವಲ್ ಮೀಟಿಂಗ್ ಮುಖಾಂತರ ಜರುಗಿಸುವಂತೆ ಸರ್ಕಾರವು ಮಾರ್ಗಸೂಚಿಯನ್ನು ನೀಡಿರುತ್ತದೆ. ಈ ಮಾರ್ಗಸೂಚಿಯನ್ವಯ **ಬ್ಯಾಂಕಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 23.12.2020ರ ಬುಧವಾರದಂದು ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಲು ತೀರ್ಮಾನಿಸಲಾಗಿದೆ.**

ಆದ್ದರಿಂದ ಮಾನ್ಯ ಸದಸ್ಯರು ವಾರ್ಷಿಕ ಮಹಾಸಭೆಯ ವರ್ಚ್ಯುವಲ್ ಮೀಟಿಂಗ್‌ನಲ್ಲಿ ವಿಡಿಯೋ ಕಾನ್ಫರೆನ್ಸ್/ವೆಬ್‌ಕಾಸ್ಟ್ ಮೂಲಕ ಪಾಲ್ಗೊಳ್ಳುವುದು ಸಾಮಾನ್ಯ ಸಭೆಯ ಹಾಜರಾತಿಯೆಂದು ಪರಿಗಣಿಸಲ್ಪಡುವುದರಿಂದ **ತಮ್ಮ ಷೇರು ಖಾತೆ ನಂಬರ್ ಹಾಗೂ ಮೊಬೈಲ್ ಸಂಖ್ಯೆ, ಇ-ಮೇಲ್ ಐಡಿಯನ್ನು ಕೂಡಲೇ ನಮ್ಮ ಬ್ಯಾಂಕಿನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು ಅಥವಾ ಸದಸ್ಯರುಗಳು ತಮ್ಮ ಸದಸ್ಯತ್ವ ಸಂಖ್ಯೆ, ಹೆಸರು ಹಾಗೂ ಮೊಬೈಲ್ ನಂಬರ್, ಇ-ಮೇಲ್ ಐಡಿಯನ್ನು ಬ್ಯಾಂಕಿನ ಈ ಮೊಬೈಲ್ ನಂ. 98860 72841 ಗೆ ಎಸ್.ಎಂ.ಎಸ್./ವಾಟ್ಸಾಪ್ ಮೂಲಕವೂ ಕೂಡ ನೋಂದಾಯಿಸಿಕೊಳ್ಳಲು ಅವಕಾಶವಿರುತ್ತದೆ.**

ಮಾನ್ಯ ಸದಸ್ಯರು ತಮ್ಮ ಹಾಜರಾತಿಗಾಗಿ ಈ ಕೆಳಗೆ ಕೊಟ್ಟಿರುವ ಲಿಂಕ್‌ನ್ನು ಬಳಸಿಕೊಳ್ಳಲು ಕೋರಿದೆ.
**https://kps.agm2020.in**

Scan - Get Link

| ಲೋಕಿಕೆರೆ ಸಿದ್ದಪ್ಪ, ವಕೀಲರು | ಕೆ.ಜಿ. ತಾಯಮ್ಮ | ಬಿ.ಎಲ್. ಗೌಡ | ರಮೇಶ್ ದೇವಜ್ಜಿ |
|---|---|---|---|
| ಅಧ್ಯಕ್ಷರು | ಉಪಾಧ್ಯಕ್ಷರು | ವ್ಯವಸ್ಥಾಪಕರು | ಲೆಕ್ಕಾಧಿಕಾರಿ |



### ಗೃಹ ಪ್ರವೇಶಕ್ಕೆ ಶುಭಾಶಯಗಳು

ದಿನಾಂಕ : 19.12.2020ರ ಶನಿವಾರದಂದು ಪ್ರಾರಂಭವಾಗುತ್ತಿರುವ
"ಬಸವೇಶ್ವರ ಕೃಪಾ (ಕಾಂಪ್ಲೆಕ್ಸ್)"
ಇದರ ಮಾಲೀಕರಾದ
**ಶ್ರೀಯುತ ಎನ್. ವಿಜಯಕುಮಾರ್ ಶಾಮನೂರು**
ಹಾಗೂ ವಿಶೇಷ ಪೂಜೆ ನಡೆಸುತ್ತಿರುವ ನಮ್ಮ ಆತ್ಮೀಯ ಗುರುಗಳಾದ
**ಶ್ರೀಮತಿ ವಾಣಿ ಶ್ರೀ ಸುಬ್ರಹ್ಮಣ್ಯ ಮಧ್ಯಸ್ಥ**
(ವಾಸುಕಿ ಧಾಮ, ವಾಸುಕಿ ಸುಬ್ರಹ್ಮಣ್ಯ ದೇವಸ್ಥಾನ, ಸಾಸ್ತಾನ-ಐರೋಡಿ (ಬ್ರಹ್ಮಾವರ) ಉಡುಪಿ. ಹಾಗೂ ತಂಡದವರಿಗೆ
ನಮ್ಮೆಲ್ಲರ ಹಾರ್ದಿಕ ಶುಭಾಶಯಗಳು.
ಐಗೂರು ವಿಜಯಕುಮಾರ್, ದಾವಣಗೆರೆ.,
ನಂದೀಶ್ ಎನ್.ಹೆಚ್. ಹಾಗೂ ಪಿ. ರವಿಕಿರಣ್, ಶಾಮನೂರು.



### ಅಂಜುಮನ್-ಎ-ಇಸ್ಲಾಮ್ (ವಕ್ಫ್)

ನೋಂದಣಾಧಿಕಾರಿಗಳು, ಈದ್ಗಾ ಮೈದಾನ, ಹರಿಹರ ಟೌನ್ ಮತ್ತು ತಾಲ್ಲೂಕು, ದಾವಣಗೆರೆ ಜಿಲ್ಲೆ.

**ಜನರಲ್‌ಬಾಡಿ (ನೋಂದಣಿ) ಅಧಿಸೂಚನೆ**

ಅಂಜುಮನ್-ಎ-ಇಸ್ಲಾಮ್ (ವಕ್ಫ್), ಈದ್ಗಾ ಮೈದಾನ, ಹರಿಹರ ಟೌನ್ ಮತ್ತು ತಾಲ್ಲೂಕು, ದಾವಣಗೆರೆ ಜಿಲ್ಲೆ ಇದರ ಜನರಲ್‌ಬಾಡಿ (ನೋಂದಣಿ) ಸದಸ್ಯತ್ವವನ್ನು ನೋಂದಾಯಿಸಲು ಅಧಿಸೂಚನೆಯನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿದೆ.

| | | |
|---|---|---|
| 1. | ಪ್ರಕಟಣೆ ದಿನಾಂಕ | 18/12/2020 |
| 2. | ನೋಂದಣಿ ಅರ್ಜಿ ನೀಡುವ ದಿನಾಂಕ | 21/12/2020 ರಿಂದ 16/01/2021 ಬೆಳಿಗ್ಗೆ 11 ರಿಂದ ಸಂಜೆ 4–30 ರ ವರೆಗೆ (ಸರ್ಕಾರಿ ರಜೆ ಹೊರತುಪಡಿಸಿ) |
| 3. | ಭರ್ತಿ ಮಾಡಿದ ಅರ್ಜಿ ಸ್ವೀಕರಿಸುವ ದಿನಾಂಕ | 21/12/2020 ರಿಂದ 19/01/2021 ಬೆಳಿಗ್ಗೆ 11 ರಿಂದ ಸಂಜೆ 4–30 ರ ವರೆಗೆ (ಸರ್ಕಾರಿ ರಜೆ ಹೊರತುಪಡಿಸಿ) |
| 4. | ಕರಡು ಮತದಾರರ ಪ್ರತಿ ಪ್ರಕಟಿಸುವ ದಿನಾಂಕ | 27/01/2021 |
| 5. | ಮತದಾರರ ಕರಡು ಪ್ರತಿಗೆ ಆಕ್ಷೇಪಣೆ/ಸಲಹೆ ಅರ್ಜಿ ಸಲ್ಲಿಸುವಿಕೆ | 27/01/2021 ರಿಂದ 03/01/2021 ಬೆಳಿಗ್ಗೆ 11 ರಿಂದ ಸಂಜೆ 4–30 ರ ವರೆಗೆ |
| 6. | ಆಕ್ಷೇಪಣೆ/ಸಲಹೆ ಅರ್ಜಿ ವಿಲೆಪಡಿಸುವುದು | 04/02/2021 ಸಮಯ : ಬೆಳಿಗ್ಗೆ 11–00 ಗಂಟೆ |
| 7. | ಸರ್ವ ಸದಸ್ಯರ ಅಂತಿಮ ಮತದಾರರ ಪಟ್ಟಿ ಪ್ರಕಟಿಸುವ ದಿನಾಂಕ | 10/02/2021 |

ಸಹಿ/- ಜಿಲ್ಲಾ ವಕ್ಫ್ ಅಧಿಕಾರಿಗಳು ಹಾಗೂ ನೋಂದಣಾಧಿಕಾರಿಗಳು
ಅಂಜುಮನ್-ಎ-ಇಸ್ಲಾಮ್(ವಕ್ಫ್)
ಈದ್ಗಾ ಮೈದಾನ, ಹರಿಹರ ಟೌನ್, ದಾವಣಗೆರೆ ಜಿಲ್ಲೆ



### ದಾಮ್‌ಕೋಸ್
### ದಾವಣಗೆರೆ ಅಡಿಕೆ ಅಭಿವೃದ್ಧಿ ಪರಿಷ್ಕರಣ ಮತ್ತು ಮಾರಾಟ ಸಹಕಾರ ಸಂಘ ನಿ., ದಾವಣಗೆರೆ.


ಎಂ.ಸಿ. ಗೋದಾಮು ನಂ. 1, (ಎನ್.ಜಿ.ಆರ್.ಜಿ) ಎ.ಪಿ.ಎಂ.ಸಿ. ಮಳಿಗೆ,
ಹಳೇ ಜಿಲ್ಲಾಧಿಕಾರಿಗಳ ಕಛೇರಿ ಪಕ್ಕ, ಪಿ.ಬಿ. ರಸ್ತೆ, ದಾವಣಗೆರೆ. ಫೋನ್ : 250120

**21ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ**

ಮಾನ್ಯ ಸಹಕಾರಿ ಬಂಧುಗಳೇ,


ನಮ್ಮ ಸಂಘದ 2019–2020ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ : 19–12–2020ನೇ ಶನಿವಾರ ಬೆಳಿಗ್ಗೆ 11–00 ಗಂಟೆಗೆ ಶ್ರೀ ತರಳಬಾಳು ಸಭಾಭವನ, ಅನುಭವ ಮಂಟಪ, ಆವರಣ, ಹದಡಿ ರಸ್ತೆ, ದಾವಣಗೆರೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಶಿವಕುಮಾರ್ ಬಿ.ಕೆ ಇವರ ಘನ ಅಧ್ಯಕ್ಷತೆಯಲ್ಲಿ ನಡೆಯುವಂತೆ ಏರ್ಪಡಿಸಿರುತ್ತದೆ. ಮಾನ್ಯ ಸರ್ವ ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಿ, ಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.


ಅಧ್ಯಕ್ಷರ/ನಿರ್ದೇಶಕರು, ದಾಮ್‌ಕೋಸ್, ದಾವಣಗೆರೆ.


ಶ್ರೀ ಶಿವಕುಮಾರ್ ಬಿ.ಕೆ. ಹಳೇಬಾತಿ ಅಧ್ಯಕ್ಷರು



ಶ್ರೀಮತಿ ಶಶಿಕಲಮ್ಮ ಬಿ.ಕೆ. ಹೊಸಬೆಳವನೂರು ಉಪಾಧ್ಯಕ್ಷರು


ಶ್ರೀ ಮರುಳಸಿದ್ದಪ್ಪ ಹೆಚ್. ಜಿ. ರಾಮಗೊಂಡನಹಳ್ಳಿ



ಶ್ರೀ ಉಮೇಶ್ ಕೆ.ಜಿ. ಕೊಡಗನೂರು


ಶ್ರೀ ಬಸವರಾಜಯ್ಯ ಬಿ. ಎಲೇಬೇತೂರು



ಶ್ರೀಮತಿ ಮಂಗಳಗೌರಮ್ಮ ಹೆಚ್. ಎಸ್. ನಾಗನೂರು


ಶ್ರೀ ಮಲ್ಲಿಕಾರ್ಜುನ್ ಹೆಚ್.ಜಿ. ಹನುಮನಹಳ್ಳಿ


ಶ್ರೀಮತಿ ಸುಧಾ ಕೆ. ಮಳಲ್ಕೆರೆ


ಶ್ರೀ ಮಂಜುನಾಥಯ್ಯ ಎಂ. ಆರ್. ಹಳೇಬಾತಿ, ಗುಡ್ಡದ ಕ್ಯಾಂಪ್


ಶ್ರೀ ರೇವಣಸಿದ್ದಪ್ಪ ಎ.ಜಿ. ಅತ್ತಿಗೆರೆ


ದಿ॥ ಶ್ರೀ ಕಲ್ಲಪ್ಪ ಆರ್.ವಿ. ಕಬ್ಬೂರು

ವಿಶೇಷ ಸೂಚನೆ : * ಸಭೆಯ ಆಹ್ವಾನ ಪತ್ರಿಕೆ ತಲುಪದಿದ್ದರೆ ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಸಭೆಗೆ ಆಗಮಿಸಬೇಕಾಗಿ ಸದಸ್ಯರಿಗೆ ಕೋರಲಾಗಿದೆ. * ವಾರ್ಷಿಕ ಮಹಾ ಸಭೆ ಪ್ರಯುಕ್ತ ಸಂಘದ ಕಛೇರಿಗೆ ದಿನಾಂಕ : 19–12–2020 ರಂದು ರಜೆ ಇರುತ್ತದೆ.

ವಿಶೇಷ ಸೂಚನೆ : ಸದಸ್ಯರು ವಾರ್ಷಿಕ ಮಹಾಸಭೆಗೆ ಆಗಮಿಸುವಾಗ ಸಂಘದ ವಾರ್ಷಿಕ ವರದಿ ಪತ್ರಿಕೆಯನ್ನು ಹಾಗೂ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕು.

ತರಳಬಾಳು ಸಭಾಭವನದ ಆವರಣದಲ್ಲಿ ಮಿನಿ ಕೃಷಿ ಯಂತ್ರ ಮೇಳವನ್ನು ಆಯೋಜಿಸಲಾಗಿದೆ. ಅಡಿಕೆ ಬೆಳೆಗಾರರು ಇದರ ಸದುಪಯೋಗ ಪಡೆಯಲು ಕೋರಲಾಗಿದೆ.

ಸದಸ್ಯರ ಗಮನಕ್ಕೆ :
ಜೀರಿಗೆ ಮೆಣಸಿನ ಬೆಳೆ ಮತ್ತು ಮಾರುಕಟ್ಟೆ ಸಂಬಂಧವಾಗಿ ವಿವರವಾದ ಮಾಹಿತಿಯನ್ನು ಬೆಳೆಗಾರರಾದ ಎಸ್.ವಿ. ಉದಯಕುಮಾರ್ ಇವರು ಸಭೆಯ ನಂತರ ವಿವರಿಸಲಿದ್ದಾರೆ. ಸದಸ್ಯರು ಸದುಪಯೋಗ ಪಡೆಯಲು ಕೋರಲಾಗಿದೆ.

ಕೋವಿಡ್-19 ಇರುವುದರಿಂದ ಮಾಸ್ಕ್ ಧರಿಸುವುದು ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಕಡ್ಡಾಯ ಮಾಡಲಾಗಿದೆ.

# ಹೊಸ ವರ್ಷದ ಪಾರ್ಟಿಗೆ ಸರ್ಕಾರದ ಬ್ರೇಕ್

ಬೆಂಗಳೂರು, ಡಿ. 17 - ಕೊರೊನಾ ಹಿನ್ನೆಲೆಯಲ್ಲಿ ಹೊಸ ವರ್ಷಾಚರಣೆ ನಡೆಸುವುದಕ್ಕೆ ರಾಜ್ಯ ಸರ್ಕಾರ ಬ್ರೇಕ್ ಹಾಕಿದ್ದು ಕ್ಲಬ್, ಪಬ್, ರೆಸ್ಟೋರೆಂಟ್ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಡಿ.ಜೆ. ನೃತ್ಯ, ವಿಶೇಷ ಪಾರ್ಟಿ ಸೇರಿದಂತೆ ಜನರು ಸೇರುವುದನ್ನು ನಿಷೇಧಿಸಿ ಆದೇಶ ಹೊರಡಿಸಿದೆ.

ಹೊಸ ವರ್ಷಾಚರಣೆಯ ಮೇಲೆ ಸರ್ಕಾರ ಡಿ.30ರಿಂದ ಜನವರಿ 2ರವರೆಗೆ ನಿರ್ಬಂಧ ಹೇರಿದ್ದರೂ, ಕ್ಲಬ್, ಪಬ್ ಹಾಗೂ ರೆಸ್ಟೋರೆಂಟ್‌ಗಳು ಈ ಅವಧಿಯಲ್ಲಿ ಎಂದಿನಂತೆ ಕಾರ್ಯ ನಿರ್ವಹಿಸಬಹುದಾಗಿದೆ.

ರಾಜ್ಯದಾದ್ಯಂತ ಸಾರ್ವಜನಿಕ ಸ್ಥಳಗಳಲ್ಲಿ, ಹೆಚ್ಚು ಜನ ಸೇರುವ ವಸತಿ ಸಮುಚ್ಛಯಗಳಲ್ಲಿ ಹಾಗೂ ಜನ ಸೇರುವ ಸ್ಥಳಗಳಲ್ಲಿ ಸಾಮೂಹಿಕ ಕೂಟಗಳನ್ನೂ ಸಹ ನಿಷೇಧಿಸಾಗಿದೆ.

ಆಚರಣೆಯ ಸಂದರ್ಭದಲ್ಲಿ ಹಸಿರು ಪಟಾಕಿಗಳನ್ನು ಮಾತ್ರ ಸಿಡಿಸಲು ಅವಕಾಶ ನೀಡಲಾಗಿದ್ದು, ಕೋವಿಡ್ ಹರಡುವಿಕೆ ತಡೆಯುವ ಸಂಬಂಧ ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಸಂಭ್ರಮಾಚರಣೆಯನ್ನು ಸರಳವಾಗಿ ಮತ್ತು ಅರ್ಥಗರ್ಭಿತವಾಗಿ ಆಚರಿಸುವಂತೆ ಸರ್ಕಾರವು ಆದೇಶದಲ್ಲಿ ತಿಳಿಸಿದೆ.

ಚರ್ಚ್‌ಗಳಲ್ಲಿ ಹೆಚ್ಚು ಜನರು ಗುಂಪು ಸೇರದಂತೆ ಹಾಗೂ ಅಂತರ ಕಾಯ್ದುಕೊಳ್ಳುವಂತೆ ಮೇಲ್ವಿಚಾರಕರು ಮತ್ತು ಆಯೋಜಕರು ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕು. ಹಸ್ತಲಾಘವ ಮತ್ತು ಆಲಿಂಗನವನ್ನು ನಿಷೇಧಿಸಲಾಗಿದೆ.

ಹೊಸ ವರ್ಷದ ಸಂದರ್ಭದಲ್ಲಿ ಕ್ಲಬ್, ಪಬ್, ರೆಸ್ಟೋರೆಂಟ್‌ಗಳು ಸಾಮಾನ್ಯ ದಿನಗಳಂತೆ ವ್ಯವಹಾರ ನಡೆಸಲು ಅವಕಾಶವಿದೆ. ಮದ್ಯ ಮಾರಾಟದ ಮೇಲೆ ನಿರ್ಬಂಧವಿಲ್ಲ.

ಆದರೆ, ವಿಶೇಷ ಪಾರ್ಟಿ ಹಾಗೂ ಕಾರ್ಯಕ್ರಮಗಳಿಗೆ ಅವಕಾಶವಿಲ್ಲ. ಜನರು ಒಂದೆಡೆ ಸೇರುವ ಹಾಗಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

## ಜಿಲ್ಲೆಯ ಜಡ್ಜ್‌ಗಳ ವರ್ಗಾವರ್ಗಿ



ಬೆಂಗಳೂರು, ಡಿ.17 - ದಾವಣಗೆರೆ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಎಸ್. ನಾಗಶ್ರೀ ಅವರನ್ನು ದಾವಣಗೆರೆ ಜಿಲ್ಲಾ ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರನ್ನಾಗಿ ವರ್ಗಾಯಿಸಲಾಗಿದೆ. ಈ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸುತ್ತಿದ್ದ ಜಿನರಾಳ್ಕರ್ ಅವರು ಕೊಡಗು ಜಿಲ್ಲೆಗೆ ವರ್ಗವಾದ ಹಿನ್ನೆಲೆಯಲ್ಲಿ ಕಳೆದ ಒಂದು ತಿಂಗಳಿನಿಂದ ಈ ಸ್ಥಾನ ಖಾಲಿ ಉಳಿದಿತ್ತು.

ನಾಗಶ್ರೀ ಅವರ ವರ್ಗಾವಣೆಯಿಂದ ತೆರವಾಗಿರುವ ದಾವಣಗೆರೆ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರನ್ನಾಗಿ ಕಳೆದ ವಾರ ಮುಂಬಡ್ತಿ ಪಡೆದಿರುವ ಇ.ಚಂದ್ರಕಲಾ ಅವರನ್ನು ನೇಮಕ ಮಾಡಲಾಗಿದೆ. ಚಂದ್ರಕಲಾ ಅವರು ಈವರೆಗೂ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದ ನ್ಯಾಯಿಕ ದಂಡಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಜಿಲ್ಲಾ ನ್ಯಾಯಾಧೀಶರ ಹುದ್ದೆಗೆ ಕಳೆದ ವಾರ ಮುಂಬಡ್ತಿ ಪಡೆದಿದ್ದ ದಾವಣಗೆರೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಾಬಪ್ಪ ಅವರು ಬೆಂಗಳೂರು ಜಿಲ್ಲಾ 9ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರನ್ನಾಗಿ ವರ್ಗಾಯಿಸಲಾಗಿದೆ.

## ತಹಶೀಲ್ದಾರ್‌ಗಳ ವರ್ಗಾವರ್ಗಿ ನಗರದ ಗ್ರೇಡ್ 2 ಕ್ಕೆ ಸಿ.ಜಿ. ಗೀತಾ

ಬೆಂಗಳೂರು,ಡಿ.17 - ರಾಜ್ಯದ ವಿವಿಧ ಭಾಗಗಳ ತಹಶೀಲ್ದಾರರುಗಳನ್ನು ವರ್ಗಾವರ್ಗಿ ಮಾಡಿ ಸರ್ಕಾರ ಇಂದು ಆದೇಶ ಹೊರಡಿಸಿದ್ದು, ದಾವಣಗೆರೆ ಗ್ರೇಡ್ -2 ತಹಶೀಲ್ದಾರ್ ಆಗಿ ಶ್ರೀಮತಿ ಸಿ.ಜಿ. ಗೀತಾ ಅವರನ್ನು ನೇಮಿಸಲಾಗಿದೆ. ಗೀತಾ ಅವರು ಈವರೆಗೂ ತರೀಕೆರೆಯಲ್ಲಿ ತಹಶೀಲ್ದಾರ್ ಆಗಿದ್ದರು.

ದಾವಣಗೆರೆ ಜಿಲ್ಲಾಧಿಕಾರಿಗಳ ಕಚೇರಿಯ ಚುನಾವಣಾ ತಹಶೀಲ್ದಾರ್ ಎಸ್. ಎ. ಪ್ರಸಾದ್ ಅವರನ್ನು ಮೊಳಕಾಲ್ಮೂರಿಗೆ ವರ್ಗಾಯಿಸಲಾಗಿದ್ದು, ಅವರ ಸ್ಥಾನಕ್ಕೆ ಚಳ್ಳಕೆರೆಯಲ್ಲಿರುವ ಎಂ.ಮಲ್ಲಿಕಾರ್ಜುನ್ ಅವರನ್ನು ನೇಮಿಸಲಾಗಿದೆ.

ದಾವಣಗೆರೆ ತಾಲ್ಲೂಕು ಕಚೇರಿ ಗ್ರೇಡ್ -2 ತಹಶೀಲ್ದಾರ್ ಕೆ.ಆರ್. ದೇವರಾಜ್ ಅವರನ್ನು ಚಿಕ್ಕಬಳ್ಳಾಪುರಕ್ಕೆ ವರ್ಗಾಯಿಸಲಾಗಿದೆ.

ಜಗಳೂರು ತಹಶೀಲ್ದಾರರನ್ನಾಗಿ ನೆಲಮಂಗಲ ತಾಲ್ಲೂಕು ಗ್ರೇಡ್ -2ರ ತಹಶೀಲ್ದಾರ್ ಎಂ.ಎಸ್. ರಮೇಶ್ ಅವರನ್ನು ನೇಮಿಸಲಾಗಿದೆ. ಈವರೆಗೂ ಜಗಳೂರು ಗ್ರೇಡ್ - 2 ತಹಶೀಲ್ದಾರ್ ಆಗಿದ್ದ ಶ್ರೀಮತಿ ನಾಗವೇಣಿ ಅವರನ್ನು ನೆಲಮಂಗಲ ತಾಲ್ಲೂಕಿಗೆ ವರ್ಗಾಯಿಸಲಾಗಿದೆ.

ದಾವಣಗೆರೆ ಜಿಲ್ಲಾಧಿಕಾರಿಗಳ ಕಚೇರಿಯ ಡಿಯುಡಿಸಿ ಮುನ್ಸಿಪಲ್ ತಹಶೀಲ್ದಾರ್ ಶ್ರೀಮತಿ ಜಿ. ನಳಿನ ಅವರನ್ನು ತರೀಕೆರೆಗೆ ವರ್ಗಾಯಿಸಲಾಗಿದೆ.

ಹಾವೇರಿ ತಾಲ್ಲೂಕು ಗ್ರೇಡ್ - 2 ತಹಶೀಲ್ದಾರ್ ಪಿ.ಎಸ್. ಕುಂಬಾರ ಅವರನ್ನು ರೋಣ ತಾಲ್ಲೂಕಿಗೆ ವರ್ಗಾಯಿಸಲಾಗಿದ್ದು, ಈ ಸ್ಥಾನಕ್ಕೆ ಕಾರವಾರದಲ್ಲಿರುವ ಶ್ರೀಮತಿ ಶ್ರೀದೇವಿ ವಿ. ಭಟ್ಟ ಅವರನ್ನು ನೇಮಕ ಮಾಡಲಾಗಿದೆ.


wewinbazaar.com

ಬೇಕಾಗಿದ್ದಾರೆ

ಡೋರ್ ಟು ಡೋರ್ ಮಾರ್ಕೆಟಿಂಗ್ ಮಾಡಲು
DOOR TO DOOR MARKETING

ಟೆಲಿ ಕಾಲರ್ಸ್ : TELE CALLERS

ಪುರುಷರು / ಮಹಿಳೆಯರು
ಕನಿಷ್ಠ ವಿದ್ಯಾರ್ಹತೆ : ANY DEGREE
Min : 2 Years Experience
Attractive salary

MAHARAJ E-MART Pvt.Ltd.,
No. 768/500, Lokikere Main Road,
Near Industrial Area, Davangere-577 005.
(Karnataka) INDIA. Phone : 08192-262826, Fax : 08192-262898
8147992699, 9513636501
E-mail : info@wewinbazaar.com www.wewinbazaar.com


## ನಗರದಲ್ಲಿ ಇಂದು ಉತ್ಸವಾಂಭ ದೇವಿ ಕಾರ್ತಿಕೋತ್ಸವ



ವಸಂತ ರಸ್ತೆಯ ಹಾಲೇಶ್ವರ ಪ್ರಿಂಟಿಂಗ್ ಪ್ರೆಸ್ ಹಿಂಭಾಗದಲ್ಲಿರುವ ಶ್ರೀ ಉತ್ಸವಾಂಭ ದೇವಸ್ಥಾನದ ಭಕ್ತ ಮಂಡಲಿ ಆಶ್ರಯದಲ್ಲಿ ಶ್ರೀ ಉತ್ಸವಾಂಭದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ ಮತ್ತು ಶ್ರೀ ಮಹಾಲಕ್ಷ್ಮಿ ದೇವರುಗಳ ಕಾರ್ತಿಕ ದೀಪೋತ್ಸವವು ಇಂದು ನಡೆಯಲಿದೆ. ಬೆಳಗಿನ ಜಾವ 4.30 ಕ್ಕೆ ಮಹಾರುದ್ರಾಭಿಷೇಕ, ಸಂಜೆ 7.30 ಕ್ಕೆ ಕಾರ್ತಿಕ ದೀಪೋತ್ಸವ ಜರುಗಲಿದೆ.


ಶ್ರೀ ಹರಿಹರೇಶ್ವರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ನಿ.,
ವಾಲಿಪೀರ್ ಕಾಂಪ್ಲೆಕ್ಸ್, ಬಾಲಾಜಿ ಬೇಕರಿ ಮೊದಲನೇ ಮಹಡಿ ಮುಖ್ಯ ರಸ್ತೆ, ಹರಿಹರ - 577601 ಫೋ ನಂ. 08192 242501

63ನೇ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ

ದಿನಾಂಕ 19.12.2020ನೇ ಶನಿವಾರ
ಸ್ಥಳ : ನಡುವಲ ಪೇಟೆಯಲ್ಲಿರುವ ಶ್ರೀ ನಾಮದೇವ ಕಲ್ಯಾಣ ಮಂಟಪದಲ್ಲಿ ಹರಿಹರ - 577601

ವಿಶೇಷ ಸೂಚನೆ

- ವಾರ್ಷಿಕ ಮಹಾಸಭೆಗೆ ಬರುವಾಗ ಎಲ್ಲಾ ಸದಸ್ಯರು ತಪ್ಪದೇ ವಾರ್ಷಿಕ ವರದಿಯನ್ನು ತರಬೇಕಾಗಿ ಕೋರಿದೆ.
- ಕೋವಿಡ್-19 ಇರುವುದರ ಪ್ರಯುಕ್ತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಾರ್ಗಸೂಚಿ ಅನ್ವಯ ಮಾಸ್ಕ್ ಧರಿಸುವುದು ಹಾಗೂ ಸಾಮಾಜಿಕ ಅಂತರ ಪಾಲಿಸುವುದು, ಸ್ಯಾನಿಟೈಸರ್ ಬಳಸುವುದನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
- ಕೋವಿಡ್ -19 ಪ್ರಯುಕ್ತ ಉಪಹಾರ, ಭೋಜನಾ ವ್ಯವಸ್ಥೆ ಇರುವುದಿಲ್ಲ, ಕೇವಲ ಸೀಲ್ ಮಾಡಿದ ಬಾಟಲ್ ಮೂಲಕ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.
- ಮಾನ್ಯ ಸದಸ್ಯರುಗಳಿಗೆ ಈಗಾಗಲೇ ಮಹಾಸಭೆಯ ನೋಟಿಸ್‌ಗಳನ್ನು ಕಳುಹಿಸಲಾಗಿದ್ದು, ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಲು ವಿನಂತಿಸಲಾಗಿದೆ.


ಶ್ರೀ ಅಣ್ಣಪ್ಪ.ಕೆ — ಅಧ್ಯಕ್ಷರು
ಶ್ರೀಮತಿ ವಿದ್ಯಾ.ಆರ್.ಮೆಹರ್ವಾಡೆ — ಉಪಾಧ್ಯಕ್ಷರು
ಶ್ರೀಮತಿ ರೇಖಾ ಮೆಹರ್ವಾಡೆ — ಪ್ರ. ವ್ಯವಸ್ಥಾಪಕರು






AP ENCLAVE
Exclusive Residential Plotted Development

AP ENCLAVE
ANNAPURNESHWARI






FOR THOSE WHO EXPECT MORE


Project Highlights
24x7 bus facility
24x7 Water & Power supply
Automatic LED Street Lights
Clear Files
Execellent Location
Entire Layout As per Vaastu
Execellent Water Table

AMENITIES
- Entrance Arch with Gate
- Asphalted Roads
- Kids Play Area
- Underground drainage system
- Round the clock security

- Harihar City : 05 Minutes
- Davangere City : 10 Minutes

Execellent connectivity and proximity to premier educational institutions.

Healthcare facilities and a wide range of work places.


For more details contact :
V.B. Patil 94484 76240
Amaresh V. Patil 88844 49478
Yashwanth Karur 97392 23456


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte